ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

# ಜನತಾ ವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಶುಕ್ರವಾರ, ಫೆಬ್ರವರಿ 11, 2022

ಸಂಪುಟ : 48 ಸಂಚಿಕೆ : 272 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 4 ರೂ : 4.00 www.janathavani.com janathavani@mac.com


## ದವನ್ ಕಾಲೇಜಿನ ದಾವಣಗೆರೆ ವಿಶ್ವವಿದ್ಯಾನಿಲಯ ರ್‍ಯಾಂಕ್ ವಿಜೇತರಿಗೆ ಅಭಿನಂದನೆಗಳು

Spurthi Educational Trust (R) DAVAN

2020-21ನೇ ಪದವಿ ಪರೀಕ್ಷೆಯಲ್ಲಿ ದವನ್ ಕಾಲೇಜಿಗೆ ಶೇ. 95% ಫಲಿತಾಂಶದೊಂದಿಗೆ,
ಬಿ.ಕಾಂ., ಬಿಬಿಎಂ., ಬಿಸಿಎ ಪದವಿಯಲ್ಲಿ ದಾವಣಗೆರೆ ವಿಶ್ವವಿದ್ಯಾನಿಲಯದಲ್ಲೇ ಅತ್ಯಧಿಕ ಒಟ್ಟು 08 ರ್‍ಯಾಂಕ್‌ಗಳು ಲಭಿಸಿವೆ.

Spurthi Educational Trust (R) DAVAN

BBM


ಗುಂಜನ್ ಆರ್. ಜೈನ್
3ನೇ ರ್‍ಯಾಂಕ್
ಶ್ರೀಮತಿ ಚಂದನ
ಶ್ರೀ ರಮೇಶ್ ಕುಮಾರ್


ದಿಶ್‌ನಾ ಕೆ. ಜೈನ್
4ನೇ ರ್‍ಯಾಂಕ್
ಶ್ರೀಮತಿ ವನಿತಾ
ಶ್ರೀ ಕಮಲೇಶ್ ಜಿ. ಜೈನ್


ಅಕ್ಷತಾ ಕೆ.
5ನೇ ರ್‍ಯಾಂಕ್
ಶ್ರೀಮತಿ ಜಯರತ್ನ
ಶ್ರೀ ಕುಮಾರ್ ಹೆಚ್.ಆರ್.


ಕುಂದನ್ ಡಿ. ಜೈನ್
8ನೇ ರ್‍ಯಾಂಕ್
ಶ್ರೀಮತಿ ಹರ್ಷದ್
ಶ್ರೀ ದಿನೇಶ್ ಕುಮಾರ್ ಕೆ.


ದರ್ಶಿತಾ ಎಸ್. ಜೈನ್
10ನೇ ರ್‍ಯಾಂಕ್
ಶ್ರೀಮತಿ ಶೀಲಾ
ಶ್ರೀ ಶೀತಲ್ ಕೆ. ಜೈನ್

BCA


ವಿನಯ್ ಎಸ್.ಎಂ.
4ನೇ ರ್‍ಯಾಂಕ್
ಶ್ರೀಮತಿ ಸಾವಿತ್ರಮ್ಮ
ಶ್ರೀ ಶ್ರೀಧರಮೂರ್ತಿ ಟಿ.ಆರ್.


ಕಾವ್ಯ ಬಿ.ಎಸ್.
10ನೇ ರ್‍ಯಾಂಕ್
ಶ್ರೀಮತಿ ಬಸಮ್ಮ
ಶ್ರೀ ಸಿದ್ದಲಿಂಗಪ್ಪ

B.Com


ರಶ್ಮಿ ಡಿ.ಎಸ್.
4ನೇ ರ್‍ಯಾಂಕ್
ಶ್ರೀಮತಿ ಲತಾ
ಶ್ರೀ ದಿನೇಶ್ ಎಸ್. ಸಾಂವತ್



## ದಾವಣಗೆರೆ ಹಳೆ ಭಾಗದಲ್ಲಿ ಪಥ ಸಂಚಲನ

ದಾವಣಗೆರೆ, ಫೆ.10- ಹಿಜಾಬ್-ಕೇಸರಿ ಶಾಲು ವಿವಾದದ ಹಿನ್ನೆಲೆ ಹಾಗೂ ನಗರದೇವತೆ ಶ್ರೀ ದುರ್ಗಾಂಭಿಕಾ ದೇವಿ ಜಾತ್ರೆ ನಿಮಿತ್ತ ನಗರದ ಹಳೇ ದಾವಣಗೆರೆ ವ್ಯಾಪ್ತಿಯಲ್ಲಿ ಇಂದು ಸಂಜೆ ಜಿಲ್ಲಾ ಪೊಲೀಸ್ ವತಿಯಿಂದ ಪೊಲೀಸ್ ಪಥ ಸಂಚಲನ ನಡೆಸಲಾಯಿತು.

ಹೊಂಡದ ವೃತ್ತದಿಂದ ಆರಂಭಗೊಂಡ ಪಥ ಸಂಚಲನವು ಹಾಸಬಾವಿ ಸರ್ಕಲ್, ಮದೀನಾ ಸರ್ಕಲ್, ಬಾಷಾ ನಗರ, ಆಜಾದ್ ನಗರ, ನೂರಾನಿ ಶಾದಿ ಮಹಲ್, ವೆಂಕಟೇಶ್ವರ ಸರ್ಕಲ್, ಅರಳಿಮರ ವೃತ್ತದವರೆಗೆ ಸಾಗಿತು.

ಡಿಎಆರ್, ಕೆಎಸ್‌ಆರ್ ಪಿ, ಹೋಂ ಗಾರ್ಡ್ಸ್, ದುರ್ಗಾ ಪಡೆ, ಪೊಲೀಸ್ ಬ್ಯಾಂಡ್ ತಂಡ, ರ್‍ಯಾಪಿಡ್ ಆ್ಯಕ್ಷನ್ ಫೋರ್ಸ್ (ಆರ್ ಎಎಫ್) ತಂಡ, ವಿದ್ಯಾನಗರ ಮತ್ತು ಕೆಟಿಜೆ ನಗರ ಸೇರಿದಂತೆ ನಗರದ ವಿವಿಧ ಪೊಲೀಸ್ ಠಾಣೆಗಳ ಕ್ರೈಂ ಸಿಬ್ಬಂದಿ ತಂಡ ಹಾಗೂ ವಿವಿಧ ಪೊಲೀಸ್ ತುಕಡಿಗಳು ಹೆಜ್ಜೆ ಹಾಕಿ ಸಾರ್ವಜನಿಕರನ್ನು ತಮ್ಮತ್ತ ಸೆಳೆದು ಜಾಗೃತಿ ಮತ್ತು ಆತ್ಮ ಸ್ಥೈರ್ಯ ತುಂಬುವ ಕೆಲಸ ಮಾಡಿದವು. ಉತ್ತರ ಸಂಚಾರ ವಾಹನ, 4 ಟ್ರಾಫಿಕ್ ಇಂಟರ್ ಸೆಪ್ಟರ್ ವಾಹನ, ಇಆರ್ ಎಸ್ 112 ವಾಹನ ಸೇರಿದಂತೆ ಪೊಲೀಸ್ ಅಧಿಕಾರಿಗಳ ವಾಹನಗಳು ಒಂದರ ಹಿಂದೆ ಒಂದರಂತೆ ಸಾಗಿದವು.

ಎಎಸ್ಪಿ ಆರ್.ಬಿ. ಬಸರಗಿ ನೇತೃತ್ವದಲ್ಲಿ ಡಿವೈಎಸ್ಪಿಗಳಾದ ನರಸಿಂಹ ವಿ. ತಾಮ್ರಧ್ವಜ, ಪಿ.ಬಿ. ಪ್ರಕಾಶ್, ಸಿಪಿಐಗಳಾದ ಹೆಚ್. (2ನೇ ಪುಟಕ್ಕೆ)

## ಪ್ರಚೋದನಾಕಾರಿ ಹೇಳಿಕೆ ಹರಿಬಿಟ್ಟರೆ ಕ್ರಮ: ಎಸ್ಪಿ

ದಾವಣಗೆರೆ, ಫೆ.10- ಹಿಜಾಬ್ ಮತ್ತು ಕೇಸರಿ ಶಾಲು ವಿಚಾರಕ್ಕೆ ಸಂಬಂಧಿಸಿದಂತೆ ಸಾಮಾಜಿಕ ಜಾಲತಾಣಗಳಲ್ಲಿ ಯಾವುದೇ ರೀತಿಯ ಪ್ರಚೋದನಾಕಾರಿ ಹೇಳಿಕೆಗಳನ್ನು ಹರಿಬಿಟ್ಟರೆ ಕಠಿಣ ಕಾನೂನು ಕ್ರಮ ಕೈಗೊಂಡು ರೌಡಿ ಶೀಟರ್ ಹಾಗೂ ಕಮ್ಯುನಲ್ ಗೂಂಡಾ ಶೀಟ್‌ಗಳನ್ನು ತೆರೆಯುವುದಾಗಿ ಎಸ್ಪಿ ಸಿ.ಬಿ. ರಿಷ್ಯಂತ್ ಎಚ್ಚರಿಸಿದ್ದಾರೆ.

ಜಿಲ್ಲೆಯ ಎಲ್ಲಾ ತಾಲ್ಲೂಕು ಹಾಗೂ ನಗರ ಮತ್ತು ಗ್ರಾಮಗಳಲ್ಲಿ ಯಾರಾದರೂ ಹಿಜಾಬ್ ಮತ್ತು ಕೇಸರಿ ಶಾಲು ವಿಚಾರಕ್ಕೆ ಸಂಬಂಧಿಸಿದಂತೆ ವಾಟ್ಸ್ ಆಪ್, ಫೇಸ್‌ಬುಕ್, ಇನ್ ಸ್ಟ್ರಾಗ್ರಾಮ್ ಹಾಗೂ ಸಾಮಾಜಿಕ ಜಾಲತಾಣಗಳಲ್ಲಿ ಯಾವುದೇ ರೀತಿಯ ಪೋಸ್ಟರ್ ಮತ್ತು (2ನೇ ಪುಟಕ್ಕೆ)

# ಶಾಲಾ-ಕಾಲೇಜುಗಳಲ್ಲಿ ಹಿಜಾಬ್-ಶಾಲು ಬೇಡ

### ಶಿಕ್ಷಣ ಸಂಸ್ಥೆಗಳ ಪುನರಾರಂಭಿಸಿ ಶಾಂತಿ ಕಾಪಾಡಲು ನ್ಯಾಯಾಲಯದ ಸೂಚನೆ

ಬೆಂಗಳೂರು, ಫೆ.10 – ಹಿಜಾಬ್ ಧರಿಸುವ ಕುರಿತ ಅರ್ಜಿಯ ವಿಚಾರಣೆ ಇತ್ಯರ್ಥಗೊಳ್ಳುವವರೆಗೂ ಶಿಕ್ಷಣ ಸಂಸ್ಥೆಗಳಲ್ಲಿ ಯಾವುದೇ ರೀತಿಯ ಧಾರ್ಮಿಕ ಉಡುಗೆಗಳನ್ನು ಧರಿಸದಂತೆ ವಿದ್ಯಾರ್ಥಿಗಳಿಗೆ ಕರ್ನಾಟಕ ಹೈಕೋರ್ಟ್ ತಿಳಿಸಿದೆ.

ಅರ್ಜಿಯ ವಿಚಾರಣೆಯನ್ನು ಸೋಮವಾರಕ್ಕೆ ಮುಂದೂಡಿರುವ ನ್ಯಾಯಾಲಯ, ಶಿಕ್ಷಣ ಸಂಸ್ಥೆಗಳು ವಿದ್ಯಾರ್ಥಿಗಳಿಗೆ ತರಗತಿ ನಡೆಸುವುದನ್ನು ಮುಂದುವರೆಸಬೇಕು ಎಂದು ಹೇಳಿದೆ.

ಮುಖ್ಯ ನ್ಯಾಯಮೂರ್ತಿ ರಿತು ರಾಜ್ ಅವಸ್ಥಿ, ನ್ಯಾಯಮೂರ್ತಿಗಳಾದ ಜೆ.ಎಂ. ಖಾಜಿ ಹಾಗೂ ಕೃಷ್ಣ ಎಸ್. ದೀಕ್ಷಿತ್ ಅವರನ್ನು ಒಳಗೊಂಡ ಮೂವರು ಸದಸ್ಯರ ಪೂರ್ಣ ಪೀಠ ಈ ಸೂಚನೆ ನೀಡಿದೆ.

ಈ ವಿಷಯ ಆದಷ್ಟು ಬೇಗ ಬಗೆಹರಿಯಬೇಕು ಎಂದು ನಾವು ಬಯಸುತ್ತೇವೆ. ಆದರೆ, ಅಲ್ಲಿಯವರೆಗೂ ಶಾಂತಿ ಹಾಗೂ ಸೌಹಾರ್ದತೆ ಕಾಯ್ದುಕೊಳ್ಳಬೇಕು.



ವಿಷಯ ಇತ್ಯರ್ಥವಾಗುವವರೆಗೂ ಯಾವುದೇ ಧಾರ್ಮಿಕ ಬಟ್ಟೆಗಳನ್ನು ಧರಿಸಲು ಪಟ್ಟು ಹಿಡಿಯಬಾರದು ಎಂದು ಮುಖ್ಯ ನ್ಯಾಯಮೂರ್ತಿ ಅವಸ್ಥಿ ಹೇಳಿದ್ದಾರೆ.

ಎಲ್ಲಾ ಶಿಕ್ಷಣ ಸಂಸ್ಥೆಗಳು ಆರಂಭವಾಗಬೇಕು ಎಂದು ನಾವು ನಿರ್ದೇಶಿಸುತ್ತೇವೆ. ಆದರೆ, ನ್ಯಾಯಾಲಯದ ಎದುರು ವಿಷಯ ಬಾಕಿ ಇರುವವರೆಗೆ ವಿದ್ಯಾರ್ಥಿಗಳು ಹಾಗೂ ಸಂಬಂಧಿಸಿದವರು ಯಾವುದೇ ಧಾರ್ಮಿಕ ಉಡುಗೆಗಳನ್ನು ಧರಿಸಲು ಪಟ್ಟು ಹಿಡಿಯಬಾರದು. ಅದು ಹಿಜಾಬ್ ಆಗಿರಲಿ ಅಥವಾ ಕೇಸರಿ ಶಾಲು ಆಗಿರಲಿ ಧರಿಸಬಾರದು. ಪ್ರತಿಯೊಬ್ಬರು ಸಂಯಮ ಕಾಯ್ದುಕೊಳ್ಳಬೇಕು. ನಾವು ರಾಜ್ಯದಲ್ಲಿ ಶಾಂತಿ ಹಾಗೂ ಸೌಹಾರ್ದತೆ ಬಯಸುತ್ತೇವೆ. ನಾವು ವಿಷಯದ ಪರಿಶೀಲನೆ ನಡೆಸುತ್ತೇವೆ. ಪ್ರತಿನಿತ್ಯ ವಿಚಾರಣೆ ನಡೆಸುವುದನ್ನು ಮುಂದುವರೆಸುತ್ತೇವೆ ಎಂದು ಮುಖ್ಯ ನ್ಯಾಯಮೂರ್ತಿ ತಿಳಿಸಿದ್ದಾರೆ.

ಹಿಜಾಬ್ ಧರಿಸಲು ಅವಕಾಶ ನೀಡುವಂತೆ ಅರ್ಜಿ ದಾಖಲಿಸಿರುವ ವಿದ್ಯಾರ್ಥಿನಿಯರ ಪರವಾಗಿ ವಾದ ಮಂಡಿಸಿದ ವಕೀಲ ದೇವದತ್ ಕಾಮತ್, ಈ ರೀತಿಯ ಆದೇಶ ಹೊರಡಿಸುವುದರಿಂದ ಸಂವಿಧಾನದ 25ನೇ ವಿಧಿಯಲ್ಲಿ ನೀಡಲಾಗಿರುವ ಹಕ್ಕುಗಳಿಂದ ನಮ್ಮ ಕಕ್ಷಿದಾರರು ವಂಚಿತರಾಗುತ್ತಾರೆ ಎಂದು ಹೇಳಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಮೂರ್ತಿ (2ನೇ ಪುಟಕ್ಕೆ)

## ವಿದೇಶದಿಂದ ಬರುವವರಿಗೆ ಹೋಂ ಕ್ವಾರಂಟೈನ್ ಇಲ್ಲ

ನವದೆಹಲಿ, ಫೆ. 10 – ವಿದೇಶದಿಂದ ಬರುವವರಿಗೆ ರೂಪಿಸಲಾಗಿರುವ ಕೊರೊನಾ ನಿಯಮಗಳನ್ನು ಕೇಂದ್ರ ಸರ್ಕಾರ ಬದಲಿಸಿದ್ದು, 7 ದಿನಗಳ ಕಡ್ಡಾಯ ಕ್ವಾರಂಟೈನ್ ನಿರ್ಬಂಧವನ್ನು ತೆರವುಗೊಳಿಸಿದೆ. ಹೊಸ ನಿಯಮಗಳು ಫೆಬ್ರವರಿ 14ರಿಂದ ಜಾರಿಗೆ ಬರಲಿವೆ.

ವಿದೇಶಿ ಪ್ರಯಾಣಿಕರು ಇನ್ನು ಮುಂದೆ ವಿಮಾನ ನಿಲ್ದಾಣಗಳಲ್ಲಿ ತಮ್ಮ ಗಂಟಲು ದ್ರವದ ಮಾದರಿ ನೀಡಬೇಕಿದೆ. ನಂತರ ವಿಮಾನ ನಿಲ್ದಾಣದಿಂದ ಹೊರ ನಡೆಯಲು ಅವಕಾಶ ನೀಡಲಾಗುವುದು.

ಹೋಂ ಕ್ವಾರಂಟೈನ್ ಬದಲು ಅವರು 14 ದಿನಗಳ ಕಾಲ ತಮ್ಮ ಆರೋಗ್ಯದ ಮೇಲೆ ನಿಗಾ ವಹಿಸಬೇಕು ಎಂದು ತಿಳಿಸಲಾಗುವುದು.

## ಆರೋಗ್ಯಪೂರ್ಣ ಸಮಾಜಕ್ಕಾಗಿ ಮಕ್ಕಳು ಮಹಿಳೆಯರಿಗೆ ಉಚಿತ ಚಿಕಿತ್ಸೆ: ಎಸ್ಸೆಸ್



ದಾವಣಗೆರೆ, ಫೆ.10- ಆರೋಗ್ಯಪೂರ್ಣ ಸಮಾಜ ನಿರ್ಮಾಣ ಮಾಡುವ ಉದ್ದೇಶದಿಂದ ಎಸ್.ಎಸ್.ಕೇರ್ ಟ್ರಸ್ಟ್ ಸ್ಥಾಪಿಸಿ ಈ ಮೂಲಕ ಮಕ್ಕಳು ಮತ್ತು ಮಹಿಳೆಯರಿಗೆ ಆರೋಗ್ಯ ತಪಾಸಣೆ ಮತ್ತು ಚಿಕಿತ್ಸೆ ನೀಡಲಾಗುತ್ತಿದೆ ಎಂದು ಬಾಪೂಜಿ ವಿದ್ಯಾಸಂಸ್ಥೆ ಗೌರವ ಕಾರ್ಯದರ್ಶಿಗಳೂ, ಶಾಸಕರೂ ಆದ ಡಾ. ಶಾಮನೂರು ಶಿವಶಂಕರಪ್ಪ ತಿಳಿಸಿದರು.

ಗುರುವಾರ ತಾಲ್ಲೂಕಿನ ಕಕ್ಕರಗೊಳ್ಳ ಗ್ರಾಮದಲ್ಲಿ ಎಸ್.ಎಸ್.ಕೇರ್ ಟ್ರಸ್ಟ್ ವತಿಯಿಂದ ಮಕ್ಕಳಿಗಾಗಿ ಹಮ್ಮಿಕೊಂಡಿದ್ದ ರಕ್ತಹೀನತೆ ಹಾಗೂ ಅಪೌಷ್ಠಿಕತೆ ತಪಾಸಣೆ ಶಿಬಿರ ಉದ್ಘಾಟಿಸಿ ಅವರು ಮಾತನಾಡಿದರು.

ಎಸ್.ಎಸ್.ಕೇರ್ ಟ್ರಸ್ಟ್‌ಗೆ 10 ಕೋಟಿ ರೂ. ಠೇವಣಿ ಇಟ್ಟು ಅದರ ಬಡ್ಡಿಯಲ್ಲಿ ಉಚಿತ ಚಿಕಿತ್ಸೆಗೆ ಮುಂದಾಗಿದ್ದು, ಮೊದಲ ಹಂತವಾಗಿ ಮಕ್ಕಳು ಮತ್ತು ಮಹಿಳೆಯರಿಗೆ ತಪಾಸಣೆ ಮತ್ತು ಚಿಕಿತ್ಸೆ ನೀಡಲಾಗುವುದು. ಜೊತೆಗೆ ಕಿಡ್ನಿ ವೈಫಲ್ಯ ಹೊಂದಿರುವವರಿಗೆ ಉಚಿತ ಡಯಾಲಿಸಿಸ್ ಹಾಗೂ ಕಣ್ಣು ಮತ್ತು ಹಲ್ಲಿನ ಚಿಕಿತ್ಸೆ ಉಚಿತವಾಗಿ ನೀಡಲಾಗುತ್ತಿದೆ ಎಂದರು.

ಎಸ್.ಎಸ್.ಕೇರ್ ಟ್ರಸ್ಟ್‌ನಿಂದ ಈಗಾಗಲೇ ನಗರ ಪ್ರದೇಶಗಳಲ್ಲಿ ಶಿಬಿರಗಳನ್ನು ನಡೆಸಲಾಗಿದೆ. ಗ್ರಾಮಾಂತರ ಪ್ರದೇಶದಲ್ಲಿ ಶಿಬಿರ ನಡೆಸಬೇಕೆಂದಾಗ ಪ್ರಭಾ ಮಲ್ಲಿಕಾರ್ಜುನ್ ಅವರ ತವರೂರು ಕಕ್ಕರಗೊಳ್ಳ ಗ್ರಾಮದಲ್ಲಿ ನಡೆಸಬೇಕೆಂಬ ಆಶಯವನ್ನು (2ನೇ ಪುಟಕ್ಕೆ)

## ಗೃಹ ಮಂಡಳಿಯಿಂದ ಬಡಾವಣೆ

### 893 ನಿವೇಶನಗಳ ವಿತರಣೆ: ಶಾಸಕ ಎಸ್.ವಿ.ರಾಮಚಂದ್ರ

ಜಗಳೂರು, ಫೆ.10- ಗೃಹ ಮಂಡಳಿ ವತಿಯಿಂದ ಸುಸಜ್ಜಿತ ಬಡಾವಣೆ ನಿರ್ಮಿಸಿ, 893 ನಿವೇಶನಗಳನ್ನು ವಿತರಿಸಲಾಗುವುದು ಎಂದು ಶಾಸಕ ಎಸ್ ವಿ ರಾಮಚಂದ್ರ ತಿಳಿಸಿದರು.

ಪಟ್ಟಣದ ಹೊರವಲಯದ ಅಶ್ವತ್ಥ ರೆಡ್ಡಿ ನಗರದ ಬಳಿ ಗೃಹ ಮಂಡಳಿ ವತಿಯಿಂದ ನಿವೇಶನ ಅಭಿವೃದ್ಧಿ ಪಡಿಸುವ ಜಮೀನಿನ ಜಾಗದಲ್ಲಿ ಗುದ್ದಲಿ ಪೂಜೆ ನೆರವೇರಿಸಿ ಶಾಸಕರು ಮಾತನಾಡಿದರು.

ನಗರ ಅಭಿವದ್ಧಿ ಹೊಂದುತ್ತಿರುವ ಹಿನ್ನೆಲೆಯಲ್ಲಿ ಅಶ್ವತ್ ರೆಡ್ಡಿ ನಗರದ ಬಳಿ 94 ಎಕರೆ ಪ್ರದೇಶದಲ್ಲಿ ರೈತರ ಜಮೀನು ಖರೀದಿಸಿ 40:60 ಅನುಪಾತದಲ್ಲಿ ಉತ್ತಮ ನಿವೇಶನ ನಿರ್ಮಾಣ ಮಾಡುವ ಮೂಲಕ (2ನೇ ಪುಟಕ್ಕೆ)

## 14 ರಿಂದ ತರಳಬಾಳು ಹುಣ್ಣಿಮೆ

### ಕೊಟ್ಟೂರಿನಲ್ಲಿ ನಿಗದಿಯಾಗಿದ್ದ ಹುಣ್ಣಿಮೆ ಕಾರ್ಯಕ್ರಮ ಕೋವಿಡ್ ಕಾರಣದಿಂದಾಗಿ ಸಿರಿಗೆರೆಯಲ್ಲಿ ಆಚರಣೆ



ಸಿರಿಗೆರೆ, ಫೆ. 10- ತರಳಬಾಳು ಜಗದ್ಗುರು ಬೃಹನ್ಮಠದ ವಾರ್ಷಿಕ ಉತ್ಸವವಾದ ತರಳಬಾಳು ಹುಣ್ಣಿಮೆ ಮಹೋತ್ಸವವು ಈ ವರ್ಷ ಸಿರಿಗೆರೆಯಲ್ಲಿ ನಡೆಯಲಿದೆ. ವಿಜಯ ನಗರ ಜಿಲ್ಲೆಯ ಕೊಟ್ಟೂರು ಪಟ್ಟಣದಲ್ಲಿ ಒಂಭತ್ತು ದಿನಗಳ ಕಾಲ ನಡೆಯ ಬೇಕಾಗಿದ್ದ ಈ ಮಹೋತ್ಸವವು ಕೋವಿಡ್ - 19 ರ ಕಾರಣಕ್ಕಾಗಿ ಸಿರಿಗೆರೆಯ ಮೂಲಸ್ಥಾನದಲ್ಲಿ ಮೂರು ದಿನಗಳ ಕಾಲ ಸರಳವಾಗಿ, ಸಾಂಸ್ಕೃತಿಕ ಉತ್ಸವವನ್ನಾಗಿ ಆಚರಿಸಲಾಗುತ್ತಿದೆ.

ಶ್ರೀ ಗುರುಶಾಂತೇಶ್ವರ ದಾಸೋಹ ಭವನದಲ್ಲಿ ಮೂರು ದಿನಗಳ ಕಾಲ ಬೆಳಗಿನ ಅವಧಿಯಲ್ಲಿ ವಿವಿಧ ವಿಚಾರ ಗೋಷ್ಠಿಗಳನ್ನು ಹಮ್ಮಿಕೊಳ್ಳಲಾಗಿದೆ. ಸಂಜೆ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ

ಫೆ.14ರ ಸೋಮವಾರ ಬೆಳಗ್ಗೆ 11ಕ್ಕೆ ಕನ್ನಡ ಸಾಹಿತ್ಯ ವಿಚಾರ ಗೋಷ್ಠಿಯಲ್ಲಿ 'ಮಂಕುತಿಮ್ಮನ ಕಗ್ಗದಲ್ಲಿ ಜೀವನ ಮೌಲ್ಯಗಳು' ವಿಷಯ ಕುರಿತು ಶಿವಮೊಗ್ಗದ ಪ್ರವಚನಕಾರ ರಾದ ಜಿ.ಎಸ್. ನಟೇಶ್ ಹಾಗೂ 'ಜೀವನೋತ್ಸ ವಕ್ಕಾಗಿ ಹಾಸ್ಯ' ವಿಷಯ ಕುರಿತು ದಾವಣಗೆರೆಯ ಹಿರಿಯ ವ್ಯಂಗ್ಯ ಚಿತ್ರಕಾರ ಎಚ್.ಬಿ.ಮಂಜುನಾಥ್ ಮಾತನಾಡಲಿದ್ದಾರೆ. (2ನೇ ಪುಟಕ್ಕೆ)

## 14ರಿಂದ ಹೈಸ್ಕೂಲ್ ಪುನರಾರಂಭ

### ಕಾಲೇಜು ಆರಂಭ: ಸದ್ಯಕ್ಕೆ ನಿರ್ಧಾರವಿಲ್ಲ

ಬೆಂಗಳೂರು, ಫೆ. 10- ಹಿಜಾಬ್ ಹಾಗೂ ಕೇಸರಿ ಶಾಲು ಧರಿಸದಂತೆ ಹೈಕೋರ್ಟ್ ತಾತ್ಕಾಲಿಕ ವಾಗಿ ನಿರ್ಬಂಧಿಸಿರುವ ಹಿನ್ನೆಲೆಯಲ್ಲಿ ಹೈಸ್ಕೂಲ್‌ಗಳನ್ನು ಪುನರಾರಂಭಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆ. ಫೆ.14ರ ಸೋಮವಾರದಿಂದ ಹೈಸ್ಕೂಲ್ ಆರಂಭಿಸ (2ನೇ ಪುಟಕ್ಕೆ)



|| ಶ್ರೀ ಬೀರಲಿಂಗೇಶ್ವರ ಪ್ರಸನ್ನ ||

### ಕೈಲಾಸ ಸಮಾರಾಧನೆಯ ಆಹ್ವಾನ ಪತ್ರಿಕೆ

ಶ್ರೀಮದ್ ರೇವಣಸಿದ್ದೇಶ್ವರ ಸಿಂಹಾಸನಾಧೀಶ್ವರ ಪರಮಪೂಜ್ಯ ಜಗದ್ಗುರು
ಶ್ರೀ ಶ್ರೀ ಶ್ರೀ ನಿರಂಜನಾನಂದಪುರಿ ಮಹಾಸ್ವಾಮಿಗಳು
ಕನಕ ಗುರುಪೀಠ, ಕಾಗಿನೆಲೆ, ಇವರ ಕೃಪಾಶೀರ್ವಾದದೊಂದಿಗೆ
ದಾವಣಗೆರೆ ತಾ||, ಜಿ|| ಹೊಸಕುಂದುವಾಡ ಗ್ರಾಮದ ವಾಸಿ
ಶ್ರೀಮತಿ ಜಯಮ್ಮ ಮತ್ತು ಮಕ್ಕಳು ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ 03.02.2022ನೇ ಗುರುವಾರ ರಾತ್ರಿ 11.20ಕ್ಕೆ ನನ್ನ ಪೂಜ್ಯಪತಿಯವರಾದ
ದಿ|| ಅಗಸನಕಟ್ಟೆ ಬಸವರಾಜಪ್ಪ
(ತಾಲ್ಲೂಕು ಪಂಚಾಯಿತಿ ಮಾಜಿ ಸದಸ್ಯರು)
ಇವರು ದೈವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ ಕೈಲಾಸ ಸಮಾರಾಧನೆಯನ್ನು
ದಿನಾಂಕ 11.02.2022ನೇ ಶುಕ್ರವಾರ ಬೆಳಿಗ್ಗೆ 9.12 ರಿಂದ 12 ರವರೆಗೆ ಮೃತರ ಸ್ವಗೃಹ ಹೊಸಕುಂದುವಾಡ ದಾವಣಗೆರೆ ತಾ||
ಇಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.
ಇಂತಿ ದುಃಖತಪ್ತರು :
ಶ್ರೀಮತಿ ಜಯಮ್ಮ ಮತ್ತು ಮಕ್ಕಳು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು
ಅಗಸನಕಟ್ಟೆ ವಂಶಸ್ಥರು, ಹೊಸ ಕುಂದುವಾಡ ಹಾಗೂ ಬಂಧು-ಮಿತ್ರರು.

# ಸಂಯಮ ಕಾಪಾಡಿಕೊಳ್ಳಲು ಯುವ ಜನಾಂಗಕ್ಕೆ ಕರೆ

## ಹರಪನಹಳ್ಳಿಯಲ್ಲಿ ಉಡುಪಿಯ ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನತೀರ್ಥ ಶ್ರೀಪಾದಂಗಳವರು

ಹರಪನಹಳ್ಳಿ, ಫೆ.10- ಭಗವಂತ ಎಲ್ಲರಿಗೂ ಗುರು, ತಾಯಿ, ತಂದೆಯಾಗಿದ್ದಾನೆ ಎಂಬ ಭಾವನೆ ಯಾವಾಗಲು ನಿಮ್ಮಲ್ಲಿ ದೃಢವಾಗಿರಲಿ ಎಂದು ಉಡುಪಿಯ ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನತೀರ್ಥ ಶ್ರೀಪಾದಂಗಳವರು ಹೇಳಿದರು.

ಪಟ್ಟಣದ ಗುರು ಮಾಧ್ವ ಸೇವಾ ಸಮಿತಿಯಿಂದ ಶ್ರೀ ಮಧ್ವನವಮಿ ಉತ್ಸವದ ನಿಮಿತ್ತ ಭಕ್ತರ ಮನೆಗೆ ಶ್ರೀಗಳ ಪಾದಪೂಜೆ, ಶ್ರೀ ಮಧ್ವಾಚಾರ್ಯರಿಗೆ ವಿಶೇಷ ಪೂಜೆ, ಪಂಚಾಮೃತ ಅಭಿಷೇಕ, ಮಧ್ವಚಾರ್ಯರರ ರಥೋತ್ಸವ, ಪ್ರವಚನ ಸೇರಿದಂತೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಮಾತನಾಡಿದರು.

ಪ್ರತಿಯೊಬ್ಬರೂ ತಮ್ಮ ಪಾಲಿನ ಕರ್ತವ್ಯವನ್ನು ಪ್ರಾಮಾಣಿಕವಾಗಿ ಮಾಡಿ ಮತ್ತು ಅದರಿಂದ ದೊರೆತ ಫಲವನ್ನು ಅನುಭವಿಸಬೇಕು. ಆದರೆ ಸುಖವನ್ನು ಅನುಭವಿಸುವಾಗ ಭಗವಂತನನ್ನು ಎಂದಿಗೂ ಮರೆಯಬಾರದು ಎಂದು ಹಿತ ನುಡಿದರು.

ಹಿಜಾಬ್ ವಿವಾದಕ್ಕೆ ಸಂಬಂಧಿಸಿದಂತೆ ಪ್ರಕರಣ ನ್ಯಾಯಾಲಯದಲ್ಲಿದೆ. ಹೀಗಾಗಿ, ನ್ಯಾಯಾಲಯದ ತೀರ್ಪು ಪ್ರಕಟವಾಗುವವರೆಗೂ ಯುವಜನಾಂಗ ಸಂಯಮ ಕಾಪಾಡಿಕೊಳ್ಳಬೇಕು. ಹರಿಜನ ಕಾಲೋನಿಗಳು ಸೇರಿದಂತೆ ನಾಡಿನಾದ್ಯಂತ ಜನಜಾಗೃತಿ ಕಾರ್ಯಕ್ರಮಗಳು ಸದಾ ನಡೆಯುತ್ತಿರುತ್ತವೆ ಎಂದ ಸ್ವಾಮೀಜಿ, ಶಾಲಾ ಮಕ್ಕಳಿಗೆ ಮೊಟ್ಟೆ ವಿತರಣೆ ಕುರಿತಂತೆ ಪ್ರತಿಕ್ರಿಯೆ ನೀಡಲು ನಿರಾಕರಿಸಿದರು.



ಕೋಲಾರದ ಶ್ರೀ ವಿದ್ಯಾವಲ್ಲಭ ಮಾಧವ ತೀರ್ಥ ಶ್ರೀಪಾದಂಗಳವರು ಮಾತನಾಡಿ, ಇಂದು ಒತ್ತಡದ ಜೀವನದಲ್ಲಿ ಬದುಕುತ್ತಿದ್ದೇವೆ. ಸುಖ, ನೆಮ್ಮದಿ ಕಾಣಬೇಕಾದರೆ ಪ್ರತಿಯೊಬ್ಬರೂ ಧರ್ಮ, ಸಂಸ್ಕಾರ, ಆಚರಣೆಯಲ್ಲಿ ಪಾಲ್ಗೊಂಡರೆ ಸುಖ ಲಭಿಸುತ್ತದೆ ಎಂದರು.

ಬೆಂಗಳೂರು ವಿದ್ವಾಂಸರಾದ ಜಿಮ್ಮಟ್ಟಿ ಶೇಷಾಚಾರ್ ಅವರು 'ಸುಮಧ್ವ ವಿಜಯ' ಪ್ರವಚನ ನೀಡಿ, ಯಾವ ವ್ಯಕ್ತಿ ದೇವರಲ್ಲಿ ಅನನ್ಯವಾದ ಭಕ್ತಿ ಆಚರಿಸುವನೋ, ಆತ ಈ ಸಂಸಾರದಿಂದ ಪಾರಾಗುವನು. ಯಾವುದೇ ಜಾತಿ, ಮತದವರಾದರೂ ಭಗವಂತನಲ್ಲಿ ಶರಣಾಗತರಾಗಿ, ಭಗವಂತನ ಭಕ್ತರಾಗಿ ಪ್ರಾಮಾಣಿಕ ಜೀವನ ನಡೆಸಿದಲ್ಲಿ ಅವರು ಮೋಕ್ಷ ಪಡೆಯಬಹುದು ಎಂದು ಸಾರಿದವರು ಜಗದ್ಗುರುಗಳಾದ ಶ್ರೀ ಮಧ್ವಚಾರ್ಯರಾಗಿದ್ದಾರೆ ಎಂದರು.

ಈ ಸಂದರ್ಭದಲ್ಲಿ ಗುರು ಮಧ್ವ ಸೇವಾ ಸಮಿತಿ ಅಧ್ಯಕ್ಷ ಎನ್.ವಿ.ಹನುಮಂತರಾವ್, ಕಾರ್ಯದರ್ಶಿ ವೈದ್ಯ ವಾದಿರಾಜ, ಖಜಾಂಚಿ ಆರ್. ಶ್ರೀಕಾಂತ, ಎ. ಗಿರಿಧರ, ಕೆ. ಪ್ರಿಯವ್ರತರಾವ್, ಡಿ. ನರಸಿಂಹಮೂರ್ತಿ, ಟಿ.ವ್ಯಾಸರಾಜ, ಡಾ. ಸುಬ್ಬರಾವ್, ದಂಡಿನ ಹರೀಶ್, ಕಟ್ಟಿ ರಾಮಪ್ರಸಾದ್, ಬಾದನಹಟ್ಟಿ ಶ್ರೀನಿಧಿ, ತಟ್ಟಿ ರಾಮಪ್ರಸಾದ್, ಬಿ. ಕೃಷ್ಣಮೂರ್ತಿ, ನಾಗರಾಜ ಭಟ್, ಬಿ. ಮಾದವರಾವ್ ಸೇರಿದಂತೆ, ಇತರರು ಇದ್ದರು.

## ಮಲೇಬೆನ್ನೂರು ಸಹಜ ಸ್ಥಿತಿಗೆ
## 3 ಪ್ರಕರಣ ದಾಖಲು, ನಾಲ್ವರ ಬಂಧನ

ಮಲೇಬೆನ್ನೂರು, ಫೆ.10- ಹಿಜಾಬ್ ವಿವಾದ ಕುರಿತು ಪಟ್ಟಣದಲ್ಲಿ ಬುಧವಾರ ನಡೆದ ಘಟನೆಗೆ ಸಂಬಂಧಿಸಿದಂತೆ ಇಲ್ಲಿನ ಪೊಲೀಸ್ ಠಾಣೆಯಲ್ಲಿ ಮೂರು ಪ್ರಕರಣಗಳು ದಾಖಲಾಗಿವೆ.

ಹಿಜಾಬ್ ಕುರಿತು ಸಾಮಾಜಿಕ ಜಾಲತಾಣದಲ್ಲಿ ಪ್ರಚೋದನಕಾರಿ ಚಿತ್ರ ಹಾಕಿದ ಯುವಕನ ಮೇಲೆ ಇನ್ನೊಂದು ಗುಂಪಿನವರು ನೀಡಿದ ದೂರು ಮತ್ತು ಪ್ರಚೋದನಕಾರಿ ಚಿತ್ರ ಹಾಕಿ ಇನ್ನೊಂದು ಗುಂಪಿನವರಿಂದ ಹಲ್ಲೆಗೊಳಗಾಗಿ ಗಾಯಗೊಂಡು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಯುವಕ ಸೇರಿದಂತೆ 23 ಜನರ ಮೇಲೆ ನೀಡಿರುವ ದೂರು ಹಾಗೂ ಪೊಲೀಸರ ಕರ್ತವ್ಯಕ್ಕೆ ಅಡ್ಡಿ ಪಡಿಸಿರುವ 17 ಜನರ ಮೇಲೆ ಪೊಲೀಸರು ದಾಖಲಿಸಿಕೊಂಡಿರುವ ಮತ್ತೊಂದು ಕೇಸಾಗಿದೆ.

ಈ 3 ಕೇಸ್‌ಗಳ ಪೈಕಿ ಯುವಕನ ಮೇಲೆ ಹಲ್ಲೆ ಮಾಡಿ ಗಾಯಗೊಳಿಸಿದ ಪ್ರಕರಣಕ್ಕೆ ಸೇರಿದ ನಾಲ್ವರು ಯುವಕರನ್ನು ಬಂಧಿಸಿ, ನ್ಯಾಯಾಂಗ ಬಂಧನಕ್ಕೆ ಒಳಪಡಿಸಲಾಗಿದೆ ಎಂದು ಪಿಎಸ್‌ಐ ರವಿಕುಮಾರ್ 'ಜನತಾವಾಣಿ'ಗೆ ತಿಳಿಸಿದ್ದಾರೆ. ಬುಧವಾರ ನಡೆದ ಘಟನೆಯಿಂದಾಗಿ ಗುರುವಾರದ ಸಂತೆಯನ್ನು ರದ್ದು ಪಡಿಸಲಾಗಿತ್ತಾದರೂ ವಿಷಯ ತಿಳಿಯದ ಜನ ಸಂತೆ ಇದೆ ಎಂದುಕೊಂಡು ಬಂದಿದ್ದರು.

ಬುಧವಾರ ಸ್ತಬ್ಧವಾಗಿದ್ದ ಪಟ್ಟಣದಲ್ಲಿ ಗುರುವಾರ ಎಂದಿನಂತೆ ಅಂಗಡಿ - ಮುಂಗಟ್ಟಗಳು ತೆರೆದಿದ್ದವು. ಹಳ್ಳಿ ಜನರ ಭೇಟಿ ಕಡಿಮೆಯಾಗಿತ್ತೆಂದು ವರ್ತಕರು ತಿಳಿಸಿದರು.

**ಪಥಸಂಚಲನ :** ಪಟ್ಟಣದಲ್ಲಿ ಶಾಂತಿ, ಸುವ್ಯವಸ್ಥೆ ಬಲಪಡಿಸುವ ಸಲುವಾಗಿ ಶುಕ್ರವಾರ ಬೆಳಿಗ್ಗೆ 9 ಗಂಟೆಗೆ ಪ್ರಮುಖ ರಸ್ತೆಗಳಲ್ಲಿ ಆರ್‌ಎಎಫ್, ಕೆಎಸ್‌ಆರ್‌ಪಿ, ಕ್ಯೂ.ಆರ್.ಪಿ, ದುರ್ಗಾಪಡೆ, ಗೃಹ ರಕ್ಷಕ ದಳ ಮತ್ತು ಪೊಲೀಸ್ ಸಿಬ್ಬಂದಿಗಳಿಂದ ಎಎಸ್ಪಿ ರಾಮಗೊಂಡ ಬಸರಗಿ, ಡಿವೈಎಸ್ಪಿ ಬಸವರಾಜ್, ಸಿಪಿಐ ಸತೀಶ್ ಅವರ ನೇತೃತ್ವದಲ್ಲಿ ಪಥ ಸಂಚಲನ ಹಮ್ಮಿಕೊಳ್ಳಲಾಗಿದೆ.

## ಹಿಜಾಬ್ - ಶಾಲು ಬೇಡ

**(1ನೇ ಪುಟದಿಂದ)** ಅವಸ್ಥಿ, ಇದು ಕೆಲವೇ ದಿನಗಳ ವ್ಯವಸ್ಥೆ. ನಂತರದಲ್ಲಿ ವಿಷಯ ಬಗೆಹರಿಸಲಾಗುವುದು. ಇದಕ್ಕೆ ನೀವು ಸಹಕರಿಸಬೇಕು ಎಂದು ಹೇಳಿದರು. ಮಧ್ಯಂತರ ನಿರ್ಬಂಧಕ್ಕೆ ಆಕ್ಷೇಪಿಸುವುದನ್ನು ಮುಂದುವರೆಸಿದ ವಕೀಲ ಕಾಮತ್, ಈ ರೀತಿಯ ಆದೇಶವನ್ನು ಈ ಹಂತದಲ್ಲಿ ಹೊರಡಿಸಲಾಗುವುದು. ಇದಕ್ಕೆ ತಮ್ಮ ಆಕ್ಷೇಪ ಇದೆ ಎಂಬುದನ್ನು ದಾಖಲಿಸಿಕೊಳ್ಳಬೇಕು ಎಂದು ಮನವಿ ಮಾಡಿಕೊಂಡರು.

ಆದರೆ, ಮುಖ್ಯ ನ್ಯಾಯಮೂರ್ತಿ ಪ್ರಕರಣದ ವಿಚಾರಣೆಯನ್ನು ಸೋಮವಾರ ಮಧ್ಯಾಹ್ನ 2.30ಕ್ಕೆ ಮುಂದೂಡಿದರು.

## 14ರಿಂದ ಹೈಸ್ಕೂಲ್ ಪುನರಾರಂಭ

**(1ನೇ ಪುಟದಿಂದ)** ಲಾಗುವುದು. ಎರಡನೇ ಹಂತದಲ್ಲಿ ಪಿಯುಸಿ ಮತ್ತು ಪದವಿ ಕಾಲೇಜುಗಳನ್ನು ಆರಂಭಿಸಲಾಗುವುದು ಎಂದು ಸಿಎಂ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ. ಆದರೆ, ಕಾಲೇಜು ಆರಂಭದ ದಿನಾಂಕ ತಿಳಿಸಿಲ್ಲ.

# 14 ರಿಂದ ತರಳಬಾಳು ಹುಣ್ಣಿಮೆ

**(1ನೇ ಪುಟದಿಂದ)** ಸಂಜೆ 6:30ಕ್ಕೆ ಸಭಾ ಕಾರ್ಯಕ್ರಮದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಸಚಿವ ಕೆ.ಎಸ್.ಈಶ್ವರಪ್ಪ, ನಗರಾಭಿವೃದ್ಧಿ ಇಲಾಖೆ ಸಚಿವ ಭೈರತಿ ಬಸವರಾಜ್, ವಿಧಾನ ಪರಿಷತ್ ಶಾಸಕ ಕೆ.ಎಸ್.ನವೀನ್‌ಕುಮಾರ್ ಹಾಗೂ ವಿಶೇಷ ಆಹ್ವಾನಿತರಾಗಿ ದಾವಣಗೆರೆ ಜಿಲ್ಲಾಧಿಕಾರಿ ಮಹಂತೇಶ್ ಬೀಳಗಿ, ಚಿತ್ರದುರ್ಗ ಜಿಲ್ಲಾಧಿಕಾರಿ ಕವಿತ ಎಸ್.ಮನ್ನಿಕೇರಿ ಭಾಗವಹಿಸಲಿದ್ದಾರೆ.

ದಾವಣಗೆರೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಬಿ. ವಾಮದೇವಪ್ಪ ಮತ್ತು ಚಿತ್ರದುರ್ಗ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಕೆ.ಎಂ.ಶಿವಸ್ವಾಮಿ ಅವರನ್ನು ಸನ್ಮಾನಿಸಲಾಗುವುದು.

**ಸಾಂಸ್ಕೃತಿಕ ಕಾರ್ಯಕ್ರಮ :** ಬೇಲೂರು ನೃತ್ಯಾಂಜಲಿ ಕಲಾ ನಿಕೇತನದವರಿಂದ ಭರತ ನಾಟ್ಯಂ, ಕುಮುಟಾದ ನಾಗರಾಜ್ ಮತ್ತು ತಂಡದಿಂದ ಯಕ್ಷಗಾನ ಪ್ರದರ್ಶನವಿದೆ. ಕಲರ್ಸ್ ಕನ್ನಡ ವಾಹಿನಿಯ 'ಎದೆತುಂಬಿ ಹಾಡುವೆನು' ಖ್ಯಾತಿಯ ಸೂರ್ಯಕಾಂತ್ ಅವರಿಂದ ಗೀತ ಗಾಯನವಿದೆ.

ತರಳಬಾಳು ಕಲಾ ಸಂಘದಿಂದ ತರಳಬಾಳು ಜಗದ್ಗುರು ವಿದ್ಯಾಸಂಸ್ಥೆಯ ವಿವಿಧ ಶಾಲಾ - ಕಾಲೇಜುಗಳ ವಿದ್ಯಾರ್ಥಿಗಳು ಮಲ್ಲಕಂಬ, ಜಡೆ ಕೋಲಾಟ, ಲಂಬಾಣಿ ನೃತ್ಯ, ವಚನ ನೃತ್ಯ, ಜನಪದ ನೃತ್ಯ, ಒನಕೆ ಓಬವ್ವ ರೂಪಕ ಕೀಲುಕುದುರೆ, ಗಾರುಡಿ ಗೊಂಬೆ ಹಾಗೂ ಡೊಳ್ಳು ಕುಣಿತ ಪ್ರದರ್ಶಿಸಲಿದ್ದಾರೆ.

**15ರ ಮಂಗಳವಾರ :** ಬೆಳಗ್ಗೆ 11ಕ್ಕೆ ವಿಜ್ಞಾನ ವಿಸ್ಮಯ ವಿಚಾರ ಗೋಷ್ಠಿಯಲ್ಲಿ ಧಾರವಾಡ ಉನ್ನತ ಶಿಕ್ಷಣ ಅಕಾಡೆಮಿಯ ನಿರ್ದೇಶಕ ಎಂ.ಎಸ್.ಶಿವಪ್ರಸಾದ್ ಅವರಿಂದ 'ವಿಜ್ಞಾನ ಕಲಿಕೆಯ ವಿಸ್ಮಯ' ರಾಜ್ಯ ವಿಜ್ಞಾನ ಪರಿಷತ್ ಕಾರ್ಯಕಾರಿ ಸಮಿತಿ ಸದಸ್ಯ ಎಚ್.ಎಸ್.ಟಿ. ಸ್ವಾಮಿಯವರಿಂದ 'ಖಗೋಳ ಕೌತುಕ' ಹಾಗೂ ಧಾರವಾಡದ ಮಹೇಶ್ ಮಾಸಾಳ್ ಅವರು 'ವಿಜ್ಞಾನ ವಿದ್ಯಾರ್ಥಿಗಳಲ್ಲಿ ವ್ಯಕ್ತಿತ್ವ ವಿಕಸನ' ಉಪನ್ಯಾಸ ನೀಡಲಿದ್ದಾರೆ.

ಸಂಜೆ 6:30ರ ಸಭಾ ಕಾರ್ಯಕ್ರಮದಲ್ಲಿ ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿಯವರು 'ಪಿಟೀಲು ವಾದನ ನುಡಿಸಲಿದ್ದಾರೆ. ಶಿಕ್ಷಣ ಸಚಿವ ಬಿ.ಸಿ. ನಾಗೇಶ್, ಸಹಕಾರ ಸಚಿವ ಎಸ್.ಟಿ.ಸೋಮಶೇಖರ ಗೌಡ ಹಾಗೂ ಶಾಸಕರಾದ ಎಸ್.ಎ.ರವೀಂದ್ರನಾಥ್, ಕೆ.ಮಾಡಾಳ್ ವಿರುಪಾಕ್ಷಪ್ಪ, ಎಂ.ಚಂದ್ರಪ್ಪ, ಎಸ್.ವಿ. ರಾಮಚಂದ್ರಪ್ಪ, ಎನ್.ರವಿಕುಮಾರ್, ಅಮೃತ ದೇಸಾಯಿ, ಎಸ್.ರುದ್ರೇಗೌಡ ಭಾಗವಹಿಸಲಿದ್ದಾರೆ.

ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಬೆಂಗಳೂರಿನ ಶಶಿಧರ್ ಕೋಟೆ ತಂಡದವರಿಂದ ಸುಗಮ ಸಂಗೀತ ಮತ್ತು ವಚನಗೀತೆ ಗಾಯನವಿದೆ. ಉತ್ತರ ಪ್ರದೇಶದ ವೃಂದಾವನದ ಅಂತರರಾಷ್ಟ್ರೀಯ ಖ್ಯಾತಿಯ ವಿಷ್ಣುಪ್ರಿಯ ಗೋಸ್ವಾಮಿ ಅವರಿಂದ ಒಡಿಸ್ಸಿ ನೃತ್ಯ, ಚೆನ್ನೈನ ಚಿತ್ರಾ ಚಂದ್ರಶೇಖರ್ ಅವರಿಂದ ಭರತ ನಾಟ್ಯ, ಹಾವೇರಿಯ ಗೊಟಗೋಡಿ ಕಲಾವಿದರಿಂದ 'ವೀರ ಅಭಿಮನ್ಯುವಿನ ವಧೆ' ದೊಡ್ಡಾಟವಿದೆ. ತರಳಬಾಳು ಕಲಾಸಂಘದಿಂದ ಮಲ್ಲಿಹಗ್ಗ, ನಗಾರಿ, ಬೀಸು ಕಂಸಾಳೆ ಪ್ರದರ್ಶನವಿದೆ.

**16ರ ಮಂಗಳವಾರ:** ಬೆಳಗ್ಗೆ 11ಕ್ಕೆ ವ್ಯಕ್ತಿತ್ವ ವಿಕಸನ ವಿಚಾರ ಗೋಷ್ಠಿಯಲ್ಲಿ ಮೈಸೂರಿನ ಡಾ.ಆರ್.ಎ.ಚೇತನ್ ರಾಮ್ ಅವರಿಂದ 'ವ್ಯಕ್ತಿತ್ವ ವಿಕಸನ' ಮತ್ತು ಶಿಕಾರಿಪುರ ಸಾಧನಾ ಅಕಾಡೆಮಿ ಸಂಸ್ಥಾಪಕ ಬಿ.ಮಂಜುನಾಥ್ 'ಪಿಯುಸಿ ನಂತರ ಮುಂದೇನು' ಎಂಬ ವಿಷಯಗಳ ಬಗ್ಗೆ ಉಪನ್ಯಾಸ ನೀಡಲಿದ್ದಾರೆ.

ಸಂಜೆ 6.30ರ ಸಭಾ ಕಾರ್ಯಕ್ರಮದಲ್ಲಿ ಡಾ.ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿಯವರಿಂದ 'ಸದ್ಧರ್ಮ ಸಿಂಹಾಸನಾರೋಹಣ' ನೆರವೇರುವುದು. ಕರ್ನಾಟಕ ಸರ್ಕಾರದ ಮುಖ್ಯಮಂತ್ರಿ ಶರಣ ಬಸವರಾಜ ಬೊಮ್ಮಾಯಿ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

ನಿಕಟಪೂರ್ವ ಸಿಎಂ ಬಿ.ಎಸ್.ಯಡಿಯೂರಪ್ಪ, ಸಾಮಾಜಿಕ ನ್ಯಾಯ ಹಾಗೂ ಸಬಲೀಕರಣ ಸಚಿವ ನಾರಾಯಣಸ್ವಾಮಿ, ಕೃಷಿ ಸಚಿವ ಮತ್ತು ಚಿತ್ರದುರ್ಗ ಉಸ್ತುವಾರಿ ಸಚಿವ ಬಿ.ಸಿ.ಪಾಟೀಲ್, ಸಣ್ಣ ನೀರಾವರಿ, ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವ ಜೆ.ಸಿ. ಮಾಧುಸ್ವಾಮಿ, ಲೋಕಸಭಾ ಸದಸ್ಯ ಜಿ.ಎಂ.ಸಿದ್ದೇಶ್ವರ, ದಾವಣಗೆರೆ ಶಾಸಕ ಶಾಮನೂರು ಶಿವಶಂಕರಪ್ಪ ಭಾಗವಹಿಸಲಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ್ ಜೋಷಿ ಅವರನ್ನು ಸನ್ಮಾನಿಸಲಾಗುವುದು.

ಬೆಂಗಳೂರಿನ ರಘುನಂದನ್ ಪ್ರಜ್ಞಾಪ್ರವಾಹ ಅವರು 'ಆಧುನಿಕ ಶಿಕ್ಷಣದ ಜೊತೆಯಲ್ಲಿ ಧಾರ್ಮಿಕ ಶಿಕ್ಷಣದ ಅಗತ್ಯತೆ' ವಿಷಯ ಕುರಿತು ಹಾಗೂ ವಿಶ್ವಬಂಧು ಮರುಳಸಿದ್ಧನ ಪರಂಪರೆ' ಬಗ್ಗೆ ವಾಗ್ಮಿ ಚಟ್ಟನಹಳ್ಳಿ ಮಹೇಶ್ ಉಪನ್ಯಾಸ ನೀಡುವರು. ದಾವಣಗೆರೆ ಸುಶ್ರಾವ್ಯ ಸಂಗೀತ ಶಾಲೆಯವರಿಂದ ವಚನಗೀತೆ ಗಾಯನವಿದೆ.

ಉತ್ತರ ಪ್ರದೇಶದ ವೃಂದಾವನದ ಅಂತರರಾಷ್ಟ್ರೀಯ ಖ್ಯಾತಿಯ ವಿಷ್ಣುಪ್ರಿಯ ಗೋಸ್ವಾಮಿ ಅವರಿಂದ ಒಡಿಸ್ಸಿ ನೃತ್ಯ, ಚೆನ್ನೈನ ಚಿತ್ರಾ ಚಂದ್ರಶೇಖರ ಅವರಿಂದ ಭರತ ನಾಟ್ಯ ಪ್ರದರ್ಶನವಿದೆ. ತರಳಬಾಳು ಕಲಾ ಸಂಘದಿಂದ ಮಲ್ಲಕಂಬ, ಮಲ್ಲಿಹಗ್ಗ ಹಾಗೂ ಶಿವಶರಣ ಹರಳಯ್ಯ ಕುರಿತ ರೂಪಕ ಪ್ರದರ್ಶಿಸಲಿದ್ದಾರೆ.

# ಗೃಹ ಮಂಡಳಿಯಿಂದ ಬಡಾವಣೆ



**(1ನೇ ಪುಟದಿಂದ)** ಆಸರೆಯಾಗಿದೆ. ನಿವೇಶನ ಅಭಿವೃದ್ಧಿಪಡಿಸಿ ಅರ್ಜಿ ಹಾಕಿದ ಫಲಾನುಭವಿಗಳಿಗೆ ಹಂಚಿಕೆ ಮಾಡಲಾಗುವುದು.

ಈಗಾಗಲೇ 2009ರ ಸಾಲಿನಲ್ಲಿ 900 ಅರ್ಜಿಗಳು ಬಂದಿವೆ. ಮುಂದಿನ ದಿನಗಳಲ್ಲಿ ಲಾಟರಿ ಮೂಲಕ ಆಯ್ಕೆ ಮಾಡುವ ಚಿಂತನೆಯಿದೆ. ಜನತೆಗೆ ನಿವೇಶನದ ಕೊರತೆಯಿದ್ದು, ಅದನ್ನು ನೀಗಿಸಲು ಗೃಹ ಮಂಡಳಿ ವತಿಯಿಂದ ನಿವೇಶನ ಸೌಲಭ್ಯ ಸಹಕಾರಿಯಾಗಿದೆ ಎಂದು ತಿಳಿಸಿದರು.

ಗೃಹ ಮಂಡಳಿ ಕಾರ್ಯಪಾಲಕ ಅಭಿಯಂತರ ಸುಧೀರ್ ನಾಮಧಾರಿ ಮಾತನಾಡಿ, 2009 ರಲ್ಲಿ ಈ ವಸತಿ ನಿವೇಶನದ ಪೂರ್ವ ತಯಾರಿ ಸಮೀಕ್ಷೆ ನಡೆಸಿದ್ದ ಫಲವಾಗಿ ಇದೀಗ ಅಸ್ತಿತ್ವಕ್ಕೆ ಬಂದಿದೆ. ಒಂದು ವರ್ಷಗಳಲ್ಲಿಯೇ ಬಡಾವಣೆ ಅಭಿವೃದ್ಧಿ ಪಡಿಸಲಿದ್ದೇವೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಪಪಂ ಅಧ್ಯಕ್ಷ ಎಸ್. ಸಿದ್ದಪ್ಪ, ಉಪಾಧ್ಯಕ್ಷೆ ಮಂಜಮ್ಮ, ಜಿ.ಪಂ. ಮಾಜಿ ಸದಸ್ಯ ಸೊಕ್ಕೆ ನಾಗರಾಜ್, ಪಿ ಎಸ್ ಐ ಸಂತೋಷ್ ಬಾಗೋಜಿ, ಪ.ಪಂ. ಸದಸ್ಯ ಪಾಪಲಿಂಗಪ್ಪ, ವಕೀಲರಾದ ಹೆಚ್.ಹನುಮಂ ತಪ್ಪ, ಮುಖಂಡರಾದ ಹಟ್ಟಿ ತಿಪ್ಪೇಸ್ವಾಮಿ, ಭರತ್ ಗ್ಯಾಸ್ ಓಬಪ್ಪ ಇತರರು ಉಪಸ್ಥಿತರಿದ್ದರು.

## ಹೇಳಿಕೆ ಹರಿಬಿಟ್ಟರೆ ಕ್ರಮ : ಎಸ್ಪಿ

**(1ನೇ ಪುಟದಿಂದ)** ಪ್ರಚೋದನಾಕಾರಿ ಹೇಳಿಕೆಗಳನ್ನು ಹಾಕಿದಲ್ಲಿ ಮತ್ತು ಇದಕ್ಕೆ ಸಂಬಂಧಪಟ್ಟಂತೆ ಯಾರಾದರೂ ಗುಂಪುಗಾರಿಕೆ, ಗಲಾಟೆ, ದೊಂಬಿ ಮಾಡುವವರ ವಿರುದ್ಧ ಪ್ರಕರಣ ದಾಖಲಿಸಿ ಕಠಿಣ ಕಾನೂನು ಕ್ರಮ ಕೈಗೊಳ್ಳುವುದಾಗಿ ಮುನ್ನೆಚ್ಚರಿಸಿದ್ದಾರೆ.

ಒಂದು ವೇಳೆ ಇದರ ಬಗ್ಗೆ ಮಾಹಿತಿ ಇದ್ದಲ್ಲಿ ಕಾನೂನು ಕೈಗೆತ್ತಿಕೊಳ್ಳದೇ ಹತ್ತಿರದ ಪೊಲೀಸ್ ಠಾಣೆಗೆ ತಿಳಿಸುವಂತೆ ಸೂಚಿಸಿದ್ದಾರೆ.

## ಹಳೆ ಭಾಗದಲ್ಲಿ ಪಥ ಸಂಚಲನ

**(1ನೇ ಪುಟದಿಂದ)** ಗುರುಬಸವರಾಜ್, ಪಿಎಸ್‌ಐಗಳಾದ ಗಜೇಂದ್ರಪ್ಪ, ವೈ.ಎಸ್. ಶಿಲ್ಪಾ, ಆರ್‌ಎಎಫ್ ಡೆಪ್ಯುಟಿ ಕಮಾಂಡೆಂಟ್ ಬೇನಮ್ಮ ಜೋಸೆಫ್, ಅಸಿಸ್ಟೆಂಟ್ ಕಮಾಂಡೆಂಟ್ ಪ್ರಜ್ವಲ್ ಸೇರಿದಂತೆ ಇನ್ನಿತರೆ ಅಧಿಕಾರಿಗಳು ಭಾಗವಹಿಸಿದ್ದರು.

# ಆರೋಗ್ಯಪೂರ್ಣ ಸಮಾಜಕ್ಕಾಗಿ ಮಕ್ಕಳು, ಮಹಿಳೆಯರಿಗೆ ಚಿಕಿತ್ಸೆ

**(1ನೇ ಪುಟದಿಂದ)** ವ್ಯಕ್ತಪಡಿಸಿದ್ದರಿಂದ ಇಂದು ಈ ಗ್ರಾಮದಲ್ಲಿ ಶಿಬಿರ ಹಮ್ಮಿಕೊಂಡಿದ್ದು, ಗ್ರಾಮಸ್ಥರು ಶಿಬಿರದ ಸದುಪಯೋಗ ಪಡೆದುಕೊಳ್ಳಬೇಕೆಂದು ಕರೆ ನೀಡಿದರು.

ಬಾಪೂಜಿ ವಿದ್ಯಾಸಂಸ್ಥೆಯ ಆಡಳಿತ ಮಂಡಳಿ ಸದಸ್ಯರಾದ ಶ್ರೀಮತಿ ಪ್ರಭಾ ಎಸ್.ಎಸ್. ಮಲ್ಲಿಕಾರ್ಜುನ್ ಮಾತನಾಡಿ, ಮಕ್ಕಳು ಮತ್ತು ಮಹಿಳೆಯರಲ್ಲಿ ಅತಿಹೆಚ್ಚು ಆರೋಗ್ಯ ಸಮಸ್ಯೆಗಳು ಕಂಡುಬಂದಿದ್ದು, ಉಚಿತ ತಪಾಸಣೆ ಮತ್ತು ಚಿಕಿತ್ಸೆ ನೀಡಲಾಗುವುದು ಎಂದರು.

ಜೆಜೆಎಂ ವೈದ್ಯಕೀಯ ಮಹಾವಿದ್ಯಾಲಯದ ಪ್ರಾಂಶುಪಾಲ ಡಾ॥ ಎಸ್.ಬಿ.ಮುರುಗೇಶ್ ಮಾತನಾಡಿ, ಈ ಶಿಬಿರ ಒಂದೇ ದಿನಕ್ಕೆ ಸೀಮಿತವಾಗಿರುವುದಿಲ್ಲ. ಪ್ರತಿ ದಿನವೂ ಕಕ್ಕರಗೊಳ್ಳ ಮತ್ತು ಕೋಡಿಹಳ್ಳಿ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳಲ್ಲಿ ಆರೋಗ್ಯ ತಪಾಸಣೆ ನಡೆಸಲಾಗುವುದು ಎಂದರು.

ಕಕ್ಕರಗೊಳ್ಳ ಗ್ರಾಮ ಪಂಚಾಯಿತಿ ಸದಸ್ಯ ಮಹಾಂತೇಶ್ ಗೌಡ್ರು ಮಾತನಾಡಿದರು.

ಇದೇ ವೇಳೆ ಅನಿಮಿಯಾ ಚಿಕಿತ್ಸೆಗಾಗಿ ಮಕ್ಕಳಿಗೆ ಕಬ್ಬಿಣಾಂಶದ ಸಿರಪ್ ಹಾಗೂ ಪೌಷ್ಠಿಕಾಂಶ ಹೊಂದಿರುವ ಆಹಾರ ನೀಡಲಾಯಿತು.

ಜಿ.ಪಂ. ಮಾಜಿ ಸದಸ್ಯ ಕೆ.ಜಿ.ಬಸವನಗೌಡ್ರು, ಮಾಜಿ ಛೇರ್ಮನ್ ಕೋಡಿಹಳ್ಳಿ ಜಯದೇವಪ್ಪ, ಕಕ್ಕರಗೊಳ್ಳ ಗ್ರಾಮ ಪಂಚಾಯಿತಿ ಅಧ್ಯಕ್ಷ ಗುತ್ತೆಪ್ಪ ಮತ್ತು ಸದಸ್ಯರುಗಳು, ಬಾಪೂಜಿ ಆಸ್ಪತ್ರೆ ನಿರ್ದೇಶಕ ಡಾ॥ ಡಿ.ಎಸ್.ಕುಮಾರ್, ಎಸ್.ಎಸ್. ವೈದ್ಯಕೀಯ ಮಹಾವಿದ್ಯಾಲಯದ ಪ್ರಾಂಶುಪಾಲ ಡಾ॥ ಬಿ.ಎಸ್.ಪ್ರಸಾದ್, ಎಸ್.ಎಸ್. ವೈದ್ಯಕೀಯ ಮಹಾವಿದ್ಯಾಲಯದ ನಿರ್ದೇಶಕ ಡಾ॥ ಎಂ. ಅರುಣಕುಮಾರ್, ಡಾ॥ ಬಾಲು, ಡಾ॥ ಯಶಸ್ವಿನಿ, ಕೆ.ಜಿ.ಗಿರಿರಾಜ್ ಇತರರು ಉಪಸ್ಥಿತರಿದ್ದರು.


**ಬೇಕಾಗಿದ್ದಾರೆ**
ಜನತಾವಾಣಿ ದಿನ ಪತ್ರಿಕೆಯಲ್ಲಿ ಸಂಜೆ ವೇಳೆ ಕೆಲಸ ಮಾಡಲು ಕನ್ನಡ ಟೈಪಿಂಗ್ ಹಾಗೂ ಭಾಷಾ ಜ್ಞಾನವಿರುವ ಯುವಕರು ಬೇಕಾಗಿದ್ದಾರೆ.
ಸಂಪರ್ಕಿಸುವ ಸಮಯ: ಬೆಳಿಗ್ಗೆ 11 ರಿಂದ 5ರ ವರೆಗೆ
ಫೋ. : 08192 254736

**ಸೈಟ್ ಮಾರಾಟಕ್ಕಿದೆ**
ಅಳತೆ : 50x80, ಜಯನಗರ ಲಿಂಕ್ ರಸ್ತೆ, 45 ಅಡಿ ಮೇನ್ ರೋಡ್, ಪೂರ್ವಕ್ಕೆ ಇದೆ. ನಿಟುವಳ್ಳಿ, ದಾವಣಗೆರೆ.
ಫೋ .: 86608 09919 90607 90962

**ಸೈಟುಗಳು ಮಾರಾಟಕ್ಕೆ (ಡಬಲ್ ರೋಡ್‌ಗೆ)**
ಕರ್ನಾಟಕ ಗೃಹ ಮಂಡಳಿಯಲ್ಲಿ 55x78 ಉತ್ತರ ಪೂರ್ವ ಕಾರ್ನರ್ 30x50 ಪೂರ್ವ, 40x60 ಉತ್ತರ. 60x80 ಪೂರ್ವ, 55x80 ವೆಸ್ಟ್ ಸೌತ್, 55x45 ವೆಸ್ಟ್ ಸೌತ್ ಕಾರ್ನರ್ ಡಬಲ್ ರೋಡ್‌ಗೆ
ಕಿರಣ್ ಬೂಸ್ನೂರ್ : 98440 63409
ಈ ಸೈಟುಗಳನ್ನು ನಾವು ಕೇವಲ (0.5) ಅರ್ಧ ಪರ್ಸೆಂಟ್ ಕಮೀಷನ್‌ಗೆ ನೇರವಾಗಿ ರಿಜಿಸ್ಟರ್ ಪಾರ್ಟಿಯಿಂದ ಕೊಡಿಸುತ್ತೇವೆ.

**ಮಾರಾಟಕ್ಕೆ/ ಖರೀದಿಗೆ ವಿಚಾರಿಸಿರಿ**
ನಂದಿನಿ ಲೇ ಔಟ್ 30x40 ಪೂರ್ವ ಮನೆ ಮೇಲೆ 2 ಅಟ್ಯಾಚ್ಡ್ ರೂಂ
ಬಸವೇಶ್ವರ ಲೇ ಔಟ್ 30x45 ಪಶ್ಚಿಮ
ಎಸ್.ಎಸ್. ಲೇಔಟ್ 40x60ಸೈಟ್ ಉತ್ತರ
ಕುವೆಂಪು ಲೇಔಟ್ 30x50 ದಕ್ಷಿಣ ಸೈಟು ಸೆಮಿ ಕಮರ್ಷಿಯಲ್
ಕೆ.ಬಿ. ಸುರೇಶ್
95911 60520

**ಮನೆ ಬಾಡಿಗೆಗೆ ಬೇಕಾಗಿದೆ**
ವಿದ್ಯಾನಗರ ಸುತ್ತಮುತ್ತ 3 ಅಥವಾ 4 ಬೆಡ್‌ರೂಂವುಳ್ಳ ಮನೆ ಬಾಡಿಗೆಗೆ ಬೇಕಾಗಿದೆ.
ಆಸಕ್ತರು ಸಂಪರ್ಕಿಸಿ :
94480 55479

**ಬೇಕಾಗಿದ್ದಾರೆ**
1) ಅನುಭವಿ ಟೆಲಿ ಕಾಲರ್-02
2) ಕಂಪ್ಯೂಟರ್ ಮತ್ತು ಇಂಟರ್‌ನೆಟ್‌ನಲ್ಲಿ ನುರಿತವರು-02
3) ಇಂಗ್ಲಿಷ್ ಮಾತನಾಡಲು ಬಲ್ಲವರು -01
ಸಂಪರ್ಕಿಸಿ : 83105 20002

**ಶಿಕ್ಷಕರು ಬೇಕಾಗಿದ್ದಾರೆ**
ಪ್ರೌಢ ಶಾಲಾ ವಿಭಾಗಕ್ಕೆ ಕನ್ನಡ, ಇಂಗ್ಲಿಷ್, ಗಣಿತ ಕ್ರಾಫ್ಟ್ ಟೀಚರ್ ಬೇಕಾಗಿದ್ದಾರೆ.
ಫೋ. : 80958 69654

**ಕೆಲಸಕ್ಕೆ ಬೇಕಾಗಿದ್ದಾರೆ**
MRP ಲಿಕ್ಕರ್ ಶಾಪ್‌ನಲ್ಲಿ ಕೆಲಸಕ್ಕೆ ಬೇಕಾಗಿದ್ದಾರೆ. ಶಾಮನೂರು ರಸ್ತೆ, ದಾವಣಗೆರೆ.
ಸಂಪರ್ಕಿಸಿ:
63628 95938, 99006 02096

**HOME LOANS 6.50%**
House Purchase Loans
House Construction Loans
House Mortgage Loans
House Loan Takeover & Stopup
Commercial Complex Loan
Rural House Loan
Business Loans, Sites Loans
Contact : 98455 87805

**ಮನೆ ಲೀಜ್, ಬಾಡಿಗೆಗೆ ಇದೆ**
ನಗರದ. ಹೃದಯಭಾಗ ದೇವರಾಜ್ ಅರಸ್ ಬಡಾವಣೆ 'ಎ' ಬ್ಲಾಕ್ 2ನೇ ಮೇನ್, 2ನೇ ಕ್ರಾಸ್ ನಲ್ಲಿ ಡಬಲ್ ಬೆಡ್ ರೂಂ, ಬೋರ್ ವೆಲ್/ ಕಾರ್ಪೊರೇಷನ್ ನೀರಿನ ಸೌಲಭ್ಯ, ಪಾರ್ಕಿಂಗ್ ವ್ಯವಸ್ಥೆ ಇರುವ. ಪೂರ್ವ ಬಾಗಿಲುಳ್ಳ ಸುಸಜ್ಜಿತ 2ನೇ ಮಹಡಿ, ಮನೆ ಲೀಸ್ ಗೆ /ಬಾಡಿಗೆಗೆ ಇದೆ.
73493 97287, 97417 46205

**ಹುಡುಗರು ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ.
98867 57688

**ಸಂಘ-ಸಂಸ್ಥೆ, NGO, ಟ್ರಸ್ಟ್‌ಗಳ GST & INCOME TAX ನೋಂದಣಿ, ನವೀಕರಣ, ಆಡಿಟ್ ಮಾಡಿಕೊಡುತ್ತೇವೆ.**
94838 62779

**ಹೆಬ್ಬೇವು ಮರಗಳು ಮಾರಾಟಕ್ಕಿವೆ**
ದಾವಣಗೆರೆ ತಾ. ಕ್ಯಾತನಹಳ್ಳಿ ಸಮೀಪ ಅಂದಾಜು 250 ಮರಗಳು ಮಾರಾಟಕ್ಕಿವೆ. ಸಂಪರ್ಕಿಸಿ :
99804 46808

**ವಧುಗಳು ಬೇಕಾಗಿದ್ದಾರೆ**
ಲಿಂಗಾಯತ ಅಥವಾ ಸಸ್ಯಹಾರಿಯಾಗಿರುವ 35 ರಿಂದ 50 ವರ್ಷದ ಹೊಸ ಜೀವನ ಬಯಸುವ ವಿಧವೆ, ವಿಚ್ಛೇದಿತ ವಧುಗಳು ಬೇಕಾಗಿದ್ದಾರೆ. (ಮಕ್ಕಳಿದ್ದರೂ ಅಭ್ಯಂತರವಿರುವುದಿಲ್ಲ)
98807 29108

**ಸೈಟ್ ಮಾರಾಟಕ್ಕಿವೆ**
ಶಕ್ತಿನಗರ ಹಾಸ್ಟೆಲ್ ಮುಂದುಗಡೆ 31x41, 31x41 ಪಶ್ಚಿಮ ಸೈಟ್ ಮಾರಾಟಕ್ಕಿದೆ.
ವಿಚಾರಿಸಿ
97402 58276

**WANTED**
Billing / Store Sales
BOLAS THE FACTORY OUTLET
Dry Fruit Shop.
For Ladies Only.
99007 08999
98451 45915

**ಮನೆ ಬಾಡಿಗೆಗೆ/ಲೀಸ್‌ಗಿದೆ**
ಹೊಸ ನಿಟುವಳ್ಳಿ ಬಡಾವಣೆ, ಬನಶಂಕರಿ ದೇವಸ್ಥಾನ ರಸ್ತೆ, ಡಬಲ್ ಬೆಡ್ ರೂಂ, ಉತ್ತರ ದಿಕ್ಕಿನ ಮನೆ, ಪಾರ್ಕಿಂಗ್ ನೀರಿನ ಸೌಲಭ್ಯವಿರುವ 1ನೇ ಮಹಡಿ ಮನೆ ಇದೆ.
ಫೋ. : 97435 59986

**HOUSE FOR RENT**
in S S Layout 'A' block near indoor stadium Davanage.
63646 43012

**ಅಕ್ವಶೈನ್ RO ವಾಟರ್ ಪ್ಯೂರಿಫೈಯರ್**
ನಮ್ಮಲ್ಲಿ ಎಲ್ಲಾ ಕಂಪನಿಯ ವಾಟರ್ ಪ್ಯೂರಿಫೈಯರ್ ಸೇಲ್ಸ್ ಮತ್ತು ಸರ್ವೀಸ್ ಮಾಡಲಾಗುತ್ತದೆ. ಹೋಲ್‌ಸೇಲ್ ದರದಲ್ಲಿ ಎಲ್ಲಾ ಬಿಡಿಭಾಗಗಳು ಲಭ್ಯವಿರುತ್ತವೆ.
ಫೋ. : 99807 27767

**ಬೇಕಾಗಿದ್ದಾರೆ**
ಆಸ್ಪತ್ರೆಯಲ್ಲಿ ನರ್ಸ್‌ಗಳು ಬೇಕಾಗಿದ್ದಾರೆ. ನುರಿತ ಅನುಭವವುಳ್ಳ A.N.M ಮತ್ತು G.N.M. ಆದವರು. ಈ ಕೆಳಗಿನ ಮೊಬೈಲ್ ನಂಬರ್‌ಗೆ ತಮ್ಮ ಬಯೋಡಾಟಾದೊಂದಿಗೆ ಸಂಪರ್ಕಿಸಿ.
M: 98450 35710

**SHOPS FOR RENT**
(with Wash Room Facility)
N.R. Road, Davangere.
94483 69523

**ಸೈಟ್‌ಗಳು ಮಾರಾಟಕ್ಕಿವೆ**
ವಿದ್ಯಾನಗರ ಲಾಸ್ಟ್ ಬಸ್ ಸ್ಟಾಪ್ ಹತ್ತಿರ 60x40 + 60x40 2 ಸೈಟ್‌ಗಳು ಮಾರಾಟಕ್ಕಿವೆ.
ಸಂಪರ್ಕಿಸಿ
99727 00163

**PRINCE CORRESPONDENCE COLLEGE**
* ನೇರವಾಗಿ ದ್ವಿತೀಯ ಪಿಯುಸಿಗೆ ಪ್ರವೇಶ ಪಡೆಯಬಹುದು (NIOS)
* Arts, Commerce, Science
* B.A., B.Com., B.Sc., BBM.,
* M.A., M.Com., M.Sc., (all sub)
* Diploma, B.E. MBA., MCA.,
& All Courses
77609 55550, 96200 28627

**TO LET**
ಶೋ ರೂಂ ಅಥವಾ ಬಾರ್ & ರೆಸ್ಟೋರೆಂಟ್ ಮಾಡಲು ಸೂಕ್ತವಾದ ಕಟ್ಟಡ ಬಾಡಿಗೆಗೆ ಇದೆ. ಶಿವಗಂಗೆ ಕನ್ವೆನ್ಷನ್ ಹಾಲ್ ಎದುರು, ಹಳೇ ಕುಂದವಾಡ ರಸ್ತೆ, ದಾವಣಗೆರೆ.
80507 02728

**ತಕ್ಷಣ ಬೇಕಾಗಿದ್ದಾರೆ**
ಕೊರಿಯರ್ ಆಫೀಸ್ ನಲ್ಲಿ ಕೆಲಸ ಮಾಡಲು ಹುಡುಗಿಯರು ಬೇಕಾಗಿದ್ದಾರೆ. ಇಂಗ್ಲಿಷ್ ಓದಲು ಬರೆಯಲು ಬರಬೇಕು. ತಮ್ಮ ಮೂಲ ದಾಖಲಾತಿಗಳೊಂದಿಗೆ ಸಂಪರ್ಕಿಸಿ
94807 95548
98800 42597

**TO LET (ಬಾಡಿಗೆಗೆ)**
ಲೇಡಿಸ್ ಮತ್ತು ಜೆಂಟ್ಸ್ ಪಿ.ಜಿ. ಹಾಗೂ ಹೋಟೆಲ್ ಮಾಡಲು ಸುಸಜ್ಜಿತವಾದ ಬಿಲ್ಡಿಂಗ್ ಬಾಡಿಗೆಗೆ ಇದೆ. ಸಂಪರ್ಕಿಸಿ: ಶುಭ ಸಿರಿ ಬಿಲ್ಡಿಂಗ್, ಹೇಮಾವತಿ ಹಾಸ್ಟೆಲ್ ಎದುರು, BIET ರೋಡ್, ಸಿದ್ದವೀರಪ್ಪ ಬಡಾವಣೆ, ದಾವಣಗೆರೆ.
80507 02728

**ತಕ್ಷಣ ಬೇಕಾಗಿದ್ದಾರೆ**
ದಾವಣಗೆರೆ ಹಾಗು ದಾವಣಗೆರೆ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಹಾಗೂ ಜಗಳೂರಿನ ಸುತ್ತ-ಮುತ್ತಲಿನ ಪ್ರದೇಶಗಳಲ್ಲಿ ಕೆಲಸ ಮಾಡಲು ಗನ್ ಮ್ಯಾನ್‌ಗಳು ಬೇಕಾಗಿದ್ದಾರೆ. ಊಟ, ವಸತಿ ಹಾಗು ಆಕರ್ಷಕ ಸಂಬಳ ESI +PF ಸೌಲಭ್ಯವಿರುತ್ತದೆ. ಸಂಪರ್ಕಿಸಿ
63667 28552, 96060 50591

**ನಿವೇಶನ ಮಾರಾಟಕ್ಕಿದೆ ನೆಲ ಬಾಡಿಗೆಗೆ**
ನಿಜಲಿಂಗಪ್ಪ ಬಡಾವಣೆ, ಶ್ರೀ ಬಕ್ಕೇಶ್ವರ ಕಲ್ಯಾಣ ಮಂಟಪ ಹಿಂಭಾಗ ಇರುವ ಸುಮಾರು 1800 ಚದುರ ಅಡಿ ಇರುವ ಮೂಲೆ ನಿವೇಶನ ಮಾರಾಟಕ್ಕೆ ಅಥವಾ ನೆಲ ಬಾಡಿಗೆಗೆ ಸಿಗುತ್ತದೆ. ಸಂಪರ್ಕಿಸಿ :
86604 50922, 98459 84706

**ಬೇಕಾಗಿದ್ದಾರೆ**
SSLC ಪಾಸ್/ ಫೇಲ್ ಆದ ಹುಡುಗಿ ಕೆಲಸಕ್ಕೆ ಬೇಕಾಗಿದ್ದಾರೆ. ಮನೆಯಿಂದಲೇ ಆನ್‌ಲೈನ್ ಅಥವಾ ಕೆಲಸ ಮಾಡಲು ಬಯಸುವ ಮಹಿಳೆಯರು ಬೇಕಾಗಿದ್ದಾರೆ. (Free Lancer) ತರಹ ಇರುತ್ತದೆ.
90355 56306

**ವಿಚಾರಿಸಿ**
ಗುಣಮಟ್ಟದ ಅಡಿಕೆ ಸಸಿಗಳಿಗೆ ವಿಚಾರಿಸಿ
99866 17127
97425 21453

**Dull in Maths**
Junior Abacus
1std to 3rd std
Vedic Maths
4 th STD to 10 std
Bruit Abacus and Vedic Maths
97390 66956

**2 BHK ಮನೆ ಬಾಡಿಗೆಗಿದೆ**
#518/46, ಸಂಜೀವಿನಿ ಆಂಜನೇಯ ದೇವಸ್ಥಾನದ ಹಿಂಭಾಗ, ಶ್ರೀ ಶಿವಕುಮಾರಸ್ವಾಮಿ ಲೇಔಟ್, 2ನೇ ಸ್ಟೇಜ್, ದಾವಣಗೆರೆಯಲ್ಲಿ ಗ್ರೌಂಡ್ ಫ್ಲೋರ್, ಡೈನಿಂಗ್, ಕಾರ್ ಪಾರ್ಕಿಂಗ್ ವ್ಯವಸ್ಥೆ ಇರುವ 2 BHK ಮನೆ ಬಾಡಿಗೆಗೆ ಇದೆ.
99587 32205

**ಇಂಡಸ್ಟ್ರಿಯಲ್ ಶೆಡ್ ಲೀಸ್‌ಗೆ ಇದೆ**
1250 ಅಡಿ, ಉತ್ತರ ದಿಕ್ಕು, 25 HP KSSIDC ಇಂಡಸ್ಟ್ರಿಯಲ್ ಏರಿಯಾ ಲೋಕಿಕೆರೆ ರೋಡ್, ದಾವಣಗೆರೆ.
98868 64602, 78929 35712

**JOBS**
Sales Manager/Executives
Any Degree (English, Computer Knowledge)
Office Job/Marketing/ Field Work, Male/Female
Freshers/Experienced
98444 92888

**EXCHANGE OFFER**
ನಮ್ಮಲ್ಲಿ ಎಲ್ಲಾ ತರಹದ ಸೋಫಾ, ಕುಷನ್ ಮತ್ತು ಸ್ಪಂಜ್ ಬೆಡ್, ಸೊಳ್ಳೆ ಮೆಸ್ ಸಿಗುತ್ತದೆ ಮತ್ತು ರಿಪೇರಿ, ಪಾಲಿಶ್ ಮಾಡಲಾಗುತ್ತದೆ.
88614 38237
78923 28599

**ಶ್ರೀ ಮುರುಘನ್ ಬೋರ್‌ವೆಲ್ಸ್**
ನಮ್ಮಲ್ಲಿ ಸೂಪರ್ ಫಾಸ್ಟ್ 4.5' ಇಂಚು ಬೋರ್‌ವೆಲ್ ಕೊರೆಯಲಾಗುವುದು. ಮನೆಯ ಒಳಗಡೆ ಮತ್ತು ಹೊರಗಡೆ 300-450 ಅಡಿಯವರೆಗೆ ಕೊರೆಯಲಾಗುವುದು.
99640 78484, 95906 15776

**T.C. ಕಳೆದಿದೆ**
ವರುಣ ಬಿ. ಆದ ನಾನು ತಿಳಿಸುವುದೇನೆಂದರೆ ದಿನಾಂಕ : 28.01.2022 ರಂದು ಸಂಜೆ 6.30 ಗಂಟೆ ಸಮಯದಲ್ಲಿ ತೋಳಹುಣಸೆ ಮುಖ್ಯ ರಸ್ತೆಯಲ್ಲಿ ಜೆರಾಕ್ಸ್ ಮಾಡಿಸುವಾಗ ಆಕಸ್ಮಿಕವಾಗಿ ಎಸ್.ಎಸ್.ಎಲ್.ಸಿ. ವರ್ಗಾವಣೆ ಪತ್ರದ ಮೂಲ ಪ್ರತಿ ಕಳೆದು ಹೋಗಿರುತ್ತದೆ. ಮುಂದಿನ ವಿದ್ಯಾಭ್ಯಾಸಕ್ಕೆ ಇದು ಅತ್ಯವಶ್ಯಕವಾದ್ದರಿಂದ ಯಾರಿಗಾದರೂ ಸಿಕ್ಕಿದ್ದಲ್ಲಿ ಗ್ರಾಮಾಂತರ ಪೋಲಿಸ್ ಠಾಣೆಗೆ ಹಿಂದಿರುಗಿಸಿ ಅಥವಾ ಈ ನಂಬರ್‌ಗೆ ಸಂಪರ್ಕಿಸಿ:
ಫೋ. : 82961 71768

**ತುರ್ತಾಗಿ ಬೇಕಾಗಿದ್ದಾರೆ**
ಹೋಟೆಲ್‌ನಲ್ಲಿ ಸರ್ವಿಸ್, ಹೆಲ್ಪರ್ ಹಾಗೂ ಕ್ಲೀನರ್ ಕೆಲಸಕ್ಕೆ ಬೇಕಾಗಿದ್ದಾರೆ. ಆಕರ್ಷಕ ವೇತನದೊಂದಿಗೆ ಊಟ ಮತ್ತು ವಸತಿ ನೀಡಲಾಗುವುದು.
ವಿಳಾಸ :
ಮಮತ ಉಪಹಾರ
ಸಿದ್ದವೀರಪ್ಪ ಬಡಾವಣೆ, BEIT ಕಾಲೇಜ್ ರಸ್ತೆ, ದಾವಣಗೆರೆ.
70902 69155, 99011 60717

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿ ಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

॥ ಶ್ರೀ ಹೊನ್ನಕೇರಿ ಮಲ್ಲಯ್ಯ ಪ್ರಸನ್ನ ॥ ॥ ಶ್ರೀ ರೇಣುಕಾದೇವಿ ಕೃಪೆ ॥

**ಕೈಲಾಸ ಸಮಾರಾಧನೆಯ ಆಹ್ವಾನ ಪತ್ರಿಕೆ**
ದಾವಣಗೆರೆ ಸಿಟಿ, ಬಸಾಪುರ ಗ್ರಾಮದ ವಾಸಿಗಳಾದ ಶ್ರೀಮತಿ ವಿದ್ಯಾವತಿ ಮತ್ತು ಮಕ್ಕಳು ಇವರು ಮಾಡುವ ವಿಜ್ಞಾಪನೆಗಳು. ದಿನಾಂಕ 08.02.2022ನೇ ಮಂಗಳವಾರ ಬೆಳಗಿನ ಜಾವ 5.30ಕ್ಕೆ ನನ್ನ ಪೂಜ್ಯ ಪತಿಯವರಾದ ಶ್ರೀ ತಿಪ್ಪೇಸ್ವಾಮಿ ಕೆ. ಇವರು ದೈವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ ಕೈಲಾಸ ಸಮಾರಾಧನೆಯನ್ನು ದಿನಾಂಕ 12.02.2022ನೇ ಶನಿವಾರ ಬೆಳಿಗ್ಗೆ 11.30 ಕ್ಕೆ ಮೃತರ ಸ್ವಗೃಹ ಶ್ರೀ ಗಣೇಶ ದೇವಸ್ಥಾನದ ಹತ್ತಿರ, ಬಸಾಪುರ ದಾವಣಗೆರೆ ಇಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.
ಇಂತಿ ದುಃಖತಪ್ತ: ಮೃತರ ಧರ್ಮಪತ್ನಿ : ಶ್ರೀಮತಿ ವಿದ್ಯಾವತಿ ಮತ್ತು ಮಕ್ಕಳು ಹಾಗು ಸಣ್ಣಪ್ಪರ ವಂಶಸ್ಥರು ಮತ್ತು ಬಂಧು-ಮಿತ್ರರು. ಮೊ: 81509 09478, 86605 98693

**ದೊಡ್ಡ ತಳವಾರ ಪಕ್ಕೀರಪ್ಪ ನಿಧನ**

ದಾವಣಗೆರೆ ತಾಲ್ಲೂಕು ಕರೂರು ಗ್ರಾಮದ ವಾಸಿ ದೊಡ್ಡ ತಳವಾರ ಪಕ್ಕೀರಪ್ಪ (85) ಇವರು ದಿನಾಂಕ 10.02.2022ರ ಗುರುವಾರ ಸಂಜೆ 4.25ಕ್ಕೆ ನಿಧನರಾದರು. ಪತ್ನಿ, ಇಬ್ಬರು ಪುತ್ರರು, ಇಬ್ಬರು ಪುತ್ರಿಯರು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 11.02.2022ರ ಶುಕ್ರವಾರ ಮಧ್ಯಾಹ್ನ 12 ಗಂಟೆಗೆ ಕರೂರು ಗ್ರಾಮದಲ್ಲಿ ನೆರವೇರಿಸಲಾಗುವುದು.

**ಭೂಮಿಕಾ ಮ್ಯಾಟ್ರಿಮೊನಿ**
ಲಿಂಗಾಯಿತ ವಧು-ವರರ ಕೇಂದ್ರ
Near Coffee day, Nutana College Road, Vidyanagara, 2nd Main, Davangere
77603 16576
90080 55813

**ಮಿಯಾಖಾನ್**
ಎಲ್ಲ ಸಮಸ್ಯೆಗಳಿಗೆ 101% ಗ್ಯಾರಂಟಿ ಪರಿಹಾರ.
ವಶೀಕರಣ ಸ್ಪೆಷಲಿಸ್ಟ್ , ನಿಮ್ಮ ಸಮಸ್ಯೆಗಳಾದ ಆಸ್ತಿ-ಪಾಸ್ತಿ, ಕೋರ್ಟ್ - ಕಛೇರಿ, ಗರ್ಭಿಣಿ ತೊಂದರೆ, ವಿದೇಶ ಪ್ರವಾಸ, ಹಣಕಾಸಿನ ತೊಂದರೆ, ಮಾಟ-ಮಂತ್ರ, ಸತಿ-ಪತಿ ಕಲಹ, ಮನೆಯಲ್ಲಿ ಅಶಾಂತಿ, ಕೆಲಸ ಮತ್ತು ವ್ಯವಹಾರದಲ್ಲಿ ತೊಂದರೆ, ಪ್ರೇಮವಿಚಾರ ಇನ್ನೂ ಮುಂತಾದ ನಿಮ್ಮ ಎಲ್ಲಾ ಸಮಸ್ಯೆಗಳಿಗೆ ಒಮ್ಮೆ ಭೇಟಿ ನೀಡಿ ತಕ್ಷಣ ಪರಿಹರಿಸಿಕೊಳ್ಳಿ. ದಾವಣಗೆರೆ
ಮೊ : 81339 33804

**ಶ್ರೀ ದತ್ತಾತ್ರೇಯ ಜೋತಿಷ್ಯಾಲಯ**
ಪಂಡಿತ್ ಶ್ರೀ ರಾಮ್ ಭಟ್
ನಿಮ್ಮ ಸಮಸ್ಯೆಗಳಾದ ವಿದ್ಯೆ, ಉದ್ಯೋಗ, ಆರೋಗ್ಯ, ಸ್ತ್ರೀ - ಪುರುಷ ವಶೀಕರಣ, ಪ್ರೀತಿಯಲ್ಲಿ ನಂಬಿ ಮೋಸ ಇನ್ನಿತರೆ ಯಾವುದೇ ಕಠಿಣ ಸಮಸ್ಯೆಗಳಿಗೆ 3 ದಿನಗಳಲ್ಲಿ ಪರಿಹಾರ. ಇಲ್ಲದಿದ್ದಲ್ಲಿ ಹಣ ವಾಪಸ್ ನೀಡಲಾಗುವುದು.
ಇಂದೇ ಕರೆ ಮಾಡಿ ; 98862 30791

**Cafe ಗೆ ಕೆಲಸಗಾರರು ಬೇಕಾಗಿದ್ದಾರೆ**
ಹುಡುಗರು/ಹುಡುಗಿಯರು ಸಂಪರ್ಕಿಸಿ : ಸ್ವಿಮ್ಮಿಂಗ್ ಪೂಲ್ ರಸ್ತೆ, ನಂದಿನಿ ಕ್ಯಾಂಟೀನ್ ಹತ್ತಿರ, ದಾವಣಗೆರೆ.
97394 45691, 96203 92069

**ಸೇಲ್ಸ್ ಬಾಯ್ಸ್ ಬೇಕಾಗಿದ್ದಾರೆ**
ದಾವಣಗೆರೆಯ ಹೆಸರಾಂತ ಸೂಟಿಂಗ್ & ಶರ್ಟಿಂಗ್ ಬಟ್ಟೆ ಅಂಗಡಿಯಲ್ಲಿ ಕಾರ್ಯ ನಿರ್ವಹಿಸಲು ಹುಡುಗರು ಬೇಕಾಗಿದ್ದಾರೆ.
90353 61640

## ಇಮಾನ್ ಮಟ್ಟಿಯಲ್ಲಿ ಇಂದು ದೇವಸ್ಥಾನಗಳ ಉದ್ಘಾಟನೆ

ಶ್ರೀ ಚಾಮುಂಡೇಶ್ವರಿ, ಆಂಜನೇಯ, ಶ್ರೀ ವಿನಾಯಕ ದೇವಸ್ಥಾನ ಸೇವಾ ಸಮಿತಿ ಟ್ರಸ್ಟ್ ವತಿಯಿಂದ ಇಂದು ಬೆಳಿಗ್ಗೆ 10.30ಕ್ಕೆ ಚಾನೆಲ್ ಏರಿಯಾದ ಇಮಾನ್ ಮಟ್ಟಿಯಲ್ಲಿ ಶ್ರೀ ಚಾಮುಂಡೇಶ್ವರಿ, ಆಂಜನೇಯ, ಗಣೇಶ ದೇವಸ್ಥಾನ ಮತ್ತು ನವಗ್ರಹ ದೇವಸ್ಥಾನಗಳ ಉದ್ಘಾಟನೆ ಹಾಗೂ ಮೂರ್ತಿ ಪ್ರತಿಷ್ಠಾಪನೆ ಸಮಾರಂಭವನ್ನು ಏರ್ಪಡಿಸಲಾಗಿದೆ.

ಸಾನ್ನಿಧ್ಯವನ್ನು ರಟ್ಟಿಹಳ್ಳಿಯ ಶ್ರೀ ಶಿವಲಿಂಗ ಶಿವಾಚಾರ್ಯ ಸ್ವಾಮೀಜಿ, ಹೆಬ್ಬಾಳು ಶ್ರೀ ಮಹಾಂತ ರುದ್ರೇಶ್ವರ ಸ್ವಾಮೀಜಿ, ಆವರಗೊಳ್ಳದ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ ವಹಿಸಲಿದ್ದಾರೆ. ಶಾಸಕ ಎಸ್.ಎ.ರವೀಂದ್ರನಾಥ್ ಉದ್ಘಾಟನೆ ನೆರವೇರಿಸುವರು.

ದೇವಸ್ಥಾನದ ಅಧ್ಯಕ್ಷ ಆರ್. ರುದ್ರೇಶ್‌ನಾಯ್ಕ ಅಧ್ಯಕ್ಷತೆ ವಹಿಸಲಿದ್ದು, ಮುಖ್ಯ ಅತಿಥಿಗಳು : ಜಿ.ಎಂ. ಸಿದ್ದೇಶ್ವರ, ಪ್ರೊ. ಲಿಂಗಣ್ಣ, ಎಸ್.ಟಿ. ವೀರೇಶ್, ಎಸ್.ಎಸ್.ಮಲ್ಲಿಕಾರ್ಜುನ್, ಎಂ. ಬಸವರಾಜ ನಾಯ್ಕ, ಟಿ.ಗುರುಸಿದ್ಧನಗೌಡ್ರು, ಗೀತಾ ನಾಗರಾಜ್, ಬಿ.ಜೆ. ಅಜಯ್‌ಕುಮಾರ್, ಲೋಕಿಕೆರೆ ನಾಗರಾಜ್, ಕೆ.ಎನ್. ಓಂಕಾರಪ್ಪ, ಟಿ.ಸಿ.ಆನಂದಪ್ಪ, ಡಾ|| ರವಿರಾಜ್, ವಿಜಯಲಕ್ಷ್ಮಿ ಮಾಚಿ ನೇನಿ, ಜಯಂತ್ ಪಿ. ಪೂಜಾರಿ, ವಿನುತ ಸುರೇಶ್, ಹೇಮಂತ ರಾಜ್, ನಾಗರಾಜ ಪಾಮೇನಹಳ್ಳಿ, ಸಂಕೋಳ್ ಚಂದ್ರಶೇಖರ್, ಶಾಂತಬಾಯಿ ಮೆಹರ್ವಾಡೆ, ಟಿ. ಬಸವರಾಜ, ಶಿವಮೂರ್ತೆಪ್ಪ, ಡಾ|| ಸುಬ್ಬಾರಾವ್, ಡಾ|| ಶಾರದಶೆಟ್ಟಿ, ಕೃಷ್ಣಪ್ಪ, ಸುಧಾ ವೀರೇಂದ್ರ ಪಾಟೀಲ್, ಯಶೋಧ ಹೆಗ್ಗಪ್ಪ, ಮಂಜಾನಾಯ್ಕ, ಸುರೇಶಣ್ಣ, ಎಂ.ಹೆಚ್. ಕುಮಾರಣ್ಣ, ರವಿಯಣ್ಣ ಹದಡಿ, ಜೆ.ಎನ್. ಶ್ರೀನಿವಾಸ್, ಕೆ. ಸಂತೋಷ್, ಸಿದ್ಧಲಿಂಗಪ್ಪ, ಆರ್.ಜೆ. ರಾಜಪ್ಪ, ಚನ್ನಬಸಪ್ಪ, ಮಂಜಣ್ಣ, ದಿನೇಶ್ ಇತರರು ಪ್ರೋತ್ಸಾಹ ನೀಡಿದ್ದಾರೆ ಎಂದು ಖಜಾಂಚಿ ಎಂ. ಕೊಟ್ರೇಶ್ ತಿಳಿಸಿದ್ದಾರೆ.

# ನದಾಫ್, ಪಿಂಜಾರ್ ಸಮಾಜದ ಅಭಿವೃದ್ಧಿ ನಿಗಮ, ಮಂಡಳಿ ರಚಿಸಲು ಆಗ್ರಹ




ದಾವಣಗೆರೆ, ಫೆ.10- ನದಾಫ್, ಪಿಂಜಾರ್ ಸಮಾಜದ ಅಭಿವೃದ್ಧಿ ನಿಗಮ ಮಂಡಳಿ ರಚಿಸುವಂತೆ ಆಗ್ರಹಿಸಿ ಕರ್ನಾಟಕ ರಾಜ್ಯ ನದಾಫ್, ಪಿಂಜಾರ್ ಸಂಘದ ಜಿಲ್ಲಾ ಘಟಕದ ವತಿಯಿಂದ ಜಿಲ್ಲಾಡಳಿತಕ್ಕೆ ಇಂದು ಮನವಿ ಸಲ್ಲಿಸಲಾಯಿತು.

ರಾಜ್ಯ ಸಂಘದ ಕರೆಯ ಮೇರೆಗೆ ಅಪರ ಜಿಲ್ಲಾಧಿಕಾರಿ ಪೂಜಾರ ವೀರಮಲ್ಲಪ್ಪ ಅವರ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಿದರು.

ರಾಜ್ಯದಲ್ಲಿ 35-40 ಲಕ್ಷ ಜನಸಂಖ್ಯೆ ಹೊಂದಿರುವ ಪಿಂಜಾರ ಸಮುದಾಯವು ಕಡು ಬಡತನದ ನೆರಳಲ್ಲಿ ಕಷ್ಟಕರ ಜೀವನ ನಡೆಸುತ್ತಿದೆ. ಆರ್ಥಿಕ, ಶೈಕ್ಷಣಿಕ ಮತ್ತು ಸಾಮಾಜಿಕವಾಗಿ ಅತೀ ಹಿಂದುಳಿದ ಜನಾಂಗ ಇದಾಗಿದ್ದು, ಸರ್ಕಾರದಿಂದ ಸೌಲಭ್ಯ ಪಡೆಯಲು ನಿಗಮ ಮಂಡಳಿ ರಚಿಸಬೇಕು ಎಂದು ಒತ್ತಾಯಿಸಲಾಗಿದೆ.

ನದಾಫ್, ಪಿಂಜಾರ ಜನಾಂಗ ನಗರ ಹಾಗೂ ಹೆಚ್ಚಾಗಿ ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುತ್ತಿದ್ದು ಗಾದಿ, ಹಗ್ಗ ತಯಾರಿಸಲಾಗುತ್ತಿದೆ. ದುಡಿಮೆಗಾಗಿ ಗೌಂಡಿ, ಕೂಲಿ ಕೆಲಸ, ಬೀದಿಗಳಲ್ಲಿ ಹಣ್ಣು, ತರಕಾರಿ ವ್ಯಾಪಾರ, ಆಟೋ ಗ್ಯಾರೇಜ್‌ಗಳಲ್ಲಿ ಸಣ್ಣ - ಪುಟ್ಟ ಉದ್ಯೋಗ ಮಾಡುತ್ತಿದೆ. ಹೀಗಾಗಿ, ಸರ್ಕಾರದಿಂದ ಹೆಚ್ಚಿನ ಸೌಲಭ್ಯ ಪಡೆದುಕೊಳ್ಳಲು ಪ್ರತ್ಯೇಕ ನಿಗಮ, ಮಂಡಳಿ ಅಗತ್ಯ. ನಿಗಮ ಮಂಡಳಿ ರಚನೆಗೆ ಕಳೆದ 10 ವರ್ಷಗಳಿಂದ ಸರ್ಕಾರಕ್ಕೆ ಮನವಿ ಸಲ್ಲಿಸುತ್ತಿದ್ದರೂ ಬೇಡಿಕೆಗೆ ಸ್ಪಂದಿಸಿಲ್ಲ. ಹಲವು ಬಾರಿ ಮುಖ್ಯಮಂತ್ರಿಗಳನ್ನು ನೇರವಾಗಿ ಭೇಟಿ ಮಾಡಿದರೂ ನಮ್ಮ ಬೇಡಿಕೆ ಈಡೇರಿಲ್ಲ. ಮೀಸಲಾತಿ ಪ್ರಕಾರ ನದಾಫ್ ಜನಾಂಗ ಪ್ರವರ್ಗ-1 ರಲ್ಲಿ ಬರುವುದರಿಂದ ಬೇಡಿಕೆ ಈಡೇರಿಲ್ಲ. ಹಲವು ತಾಂತ್ರಿಕ ದೋಷಗಳಿಂದ ಅಲ್ಪಸಂಖ್ಯಾತ ಅಭಿವೃದ್ಧಿ ನಿಗಮದ ಸೌಲಭ್ಯಗಳಿಂದ ವಂಚಿತರಾಗುತ್ತಿದ್ದೇವೆ ಎಂದು ಮನವಿ ಮಾಡಲಾಯಿತು.

ಈ ವೇಳೆ ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ಖಾದರ್ ಬಾಷಾ, ಜಿಲ್ಲಾ ಕಾರ್ಯದರ್ಶಿ ಎ. ಫಕ್ರುದ್ದೀನ್, ಮುಖಂಡರಾದ ಶೌಖತ್ ಅಲಿ, ಡಾ. ಎ.ದಾದಾಪೀರ್ ನವಿಲೇಹಾಳ್, ಕೆ.ಟಿಪ್ಪು ಮಸ್ತಾನ್, ನಿಜಾಮುದ್ದೀನ್, ಡಿ.ಸಿ. ನಯಾಜ್, ಹೆಚ್.ಸಿ. ದಾದಾಪೀರ್ ಸೇರಿದಂತೆ ಇತರರಿದ್ದರು.

## ಹಿಂದೂ ಯುವಕರ ಮೇಲೆ ಹಲ್ಲೆ ನಡೆಸಿದವರ ವಿರುದ್ಧ ಕ್ರಮಕ್ಕೆ ಒತ್ತಾಯ



**ಹರಿಹರ : ಮಾಜಿ ಶಾಸಕ ಹರೀಶ್**

ಹರಿಹರ, ಫೆ. 10 – ಮೊನ್ನೆ ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಆವರಣದಲ್ಲಿ ಹಿಜಾಬ್ ಧರಿಸುವ ವಿಚಾರಕ್ಕೆ ಸಂಬಂಧಿಸಿದಂತೆ ನಡೆದ ಗಲಾಟೆಯಲ್ಲಿ ಹಿಂದೂ ಯುವಕರ ಮೇಲೆ ಹಲ್ಲೆ ನಡೆಸಿದವರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕೆಂದು ಮಾಜಿ ಶಾಸಕ ಬಿ.ಪಿ. ಹರೀಶ್ ಒತ್ತಾಯಿಸಿದ್ದಾರೆ.

ಹಲ್ಲೆಗೆ ಗುರಿಯಾದ ಮುತ್ತುರಾಜ್ ಮತ್ತಿತರರ ಮನೆಗಳಿಗೆ ಭೇಟಿ ನೀಡಿದ ನಂತರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ನಗರದಲ್ಲಿ ಶಾಂತಿಯುತ ಜೀವನಕ್ಕೆ ಪೊಲೀಸ್ ಅಧಿಕಾರಿಗಳು ಕ್ರಮ ತೆಗೆದುಕೊಳ್ಳಬೇಕು ಎಂದು ಅವರು ಹೇಳಿದ್ದಾರೆ.

ಈ ಸಂದರ್ಭದಲ್ಲಿ ನಗರ ಬಿಜೆಪಿ ಅಧ್ಯಕ್ಷ ಅಜಿತ್ ಸಾವಂತ್, ದೂಡಾ ಮಾಜಿ ಸದಸ್ಯ ರಾಜು ರೋಖಡೆ, ಶಿವಪ್ರಕಾಶ್ ಶಾಸ್ತ್ರಿ, ವರಪ್ರಸಾದ್, ಅಗಡಿ ಮಂಜುನಾಥ್, ರವಿಕುಮಾರ್ ಮತ್ತಿತರರು ಹಾಜರಿದ್ದರು.

## ನಗರದಲ್ಲಿ 18 ರಿಂದ 3 ದಿನ ಕೃಷಿ ಮೇಳ

ದಾವಣಗೆರೆ, ಫೆ.10- ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಪೊಲೀಸ್ ಇಲಾಖೆ, ಯು.ಎಸ್. ಕಮ್ಯುನಿಕೇಶನ್ ಹಾಗೂ ದೇಶಪಾಂಡೆ ಫೌಂಡೇಶನ್ ಸಂಯುಕ್ತಾಶ್ರಯದಲ್ಲಿ ಇದೇ ದಿನಾಂಕ 18, 19 ಮತ್ತು 20 ರಂದು ಮೂರು ದಿನಗಳ ಕಾಲ ನಗರದಲ್ಲಿ ಪ್ರಥಮ ಬಾರಿಗೆ ಬಾಲಕರ ಸರ್ಕಾರಿ ಪ್ರೌಢಶಾಲೆ ಮೈದಾನದಲ್ಲಿ 'ಕೃಷಿ ಮೇಳ' ವನ್ನು ಹಮ್ಮಿಕೊಳ್ಳಲಾಗಿದೆ ಎಂದು ರಾಜ್ಯ ಕೃಷಿ ಅಭಿಯಾನ ಟ್ರಸ್ಟ್ ನಿರ್ದೇಶಕ ಮಹಾದೇವಪ್ಪ ದಿದ್ದಿಗಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಮೇಳದಲ್ಲಿ ಸುಮಾರು 150 ರಿಂದ 180 ಮಳಿಗೆಗಳು ಲಭ್ಯವಿದ್ದು, ಪ್ರತಿಷ್ಠಿತ 20 ವಿವಿಧ ಕಂಪನಿಗಳು ಸಹ ಪಾಲ್ಗೊಳ್ಳಲಿವೆ. ಉದ್ಯಮಿಗಳು ಮತ್ತು ಮಹಿಳಾ ಉದ್ಯಮಿಗಳಿಗೆ ಅವಕಾಶ ಕಲ್ಪಿಸಲಾಗಿದೆ ಎಂದರು.

ಸುಧಾರಿತ, ಸಮಗ್ರ ಸುಸ್ಥಿರ ಕೃಷಿ ಪದ್ಧತಿ, ತಾಂತ್ರಿಕ ಸಾವಯವ ಕೃಷಿ, ಮಣ್ಣಿನ ಫಲವತ್ತತೆ ಕುರಿತ ಸಮಗ್ರ ಮಾಹಿತಿ ನೀಡುವ ಪ್ರಾತ್ಯಕ್ಷಿಕೆಗಳು, ಹಸ್ತಚಾಲಿತ, ಯಂತ್ರಚಾಲಿತ, ಅತ್ಯಾಧುನಿಕ ಯಂತ್ರಗಳ ಬಳಕೆ ಬಗ್ಗೆ ಮಾಹಿತಿ ನೀಡಲಾಗುವುದು. ಅತೀ ಸಣ್ಣ, ಸಣ್ಣ ರೈತರಿಗೆ ಮತ್ತು ದೊಡ್ಡ ಹಿಡುವಳಿದಾರರು ಬಳಸಬಹುದಾದಂತಹ ಆಧುನಿಕ ಯಂತ್ರಗಳು, ಅಡಿಕೆ ಕೃಷಿಯಲ್ಲಿ ಮೌಲ್ಯವರ್ಧನೆ ಮಾಡಬಹುದಾದ ಸುಧಾರಿತ ಯಂತ್ರಗಳು, ಭತ್ತದ ಕೃಷಿಯ ಸುಧಾರಿತ ಯಂತ್ರೋಪಕರಣಗಳು, ಸೋಲಾರ್ ಪಂಪ್‌ಸೆಟ್‌ಗಳು, ಆರೋಗ್ಯ ಸಂಬಂಧಿತ ಪೇಯಗಳು, ಜಾನುವಾರು ಪರಿಪಾಲನೆ, ಸುಧಾರಿತ ಪಶು ಆಹಾರ, ಸಿರಿಧಾನ್ಯಗಳ ಮಹತ್ವ, ಸಿರಿಧಾನ್ಯಗಳ ಮೌಲ್ಯವರ್ಧನೆ, ಪೌಷ್ಠಿಕಾಂಶಗಳನ್ನೊಳಗೊಂಡ ಆಹಾರ ಧಾನ್ಯಗಳು, ಸಮಗ್ರ ಕೃಷಿ, ದ್ವಿದಳ ಧಾನ್ಯಗಳ ಪ್ರಯೋಜನದ ಬಗ್ಗೆ ತಿಳಿಸಿಕೊಡಲಾಗುವುದು ಎಂದರು.

ಕೃಷಿ, ತೋಟಗಾರಿಕೆ, ನೀರಾವರಿ ಸೇರಿದಂತೆ ಸರ್ಕಾರದ ವಿವಿಧ ಇಲಾಖೆಗಳ ಪ್ರಾತ್ಯಕ್ಷಿಕೆಗಳು, ಕೃಷಿ ತಜ್ಞರ, ಕೃಷಿ ವಿಜ್ಞಾನಿಗಳ, ಅನುಭವಿ ರೈತರ ವಿಚಾರಧಾರೆಗಳನ್ನು ಒಂದೇ ವೇದಿಕೆಯಲ್ಲಿ ಆಲಿಸುವಂತಹ ವ್ಯವಸ್ಥೆ ಮಾಡಲಾಗುವುದು ಎಂದು ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಯು.ಎಸ್. ಕಮ್ಯುನಿಕೇಷನ್ ಮಾಲೀಕರಾದ ಎಸ್.ಎಂ.ಕೆ. ಉಮಾಪತಿ, ಕೃಷಿ ಮೇಳದ ಸಂಘಟಕರಾದ ಕಲ್ಮೇಶ್ ಉಪಸ್ಥಿತರಿದ್ದರು.

# ಪಾಕಿಸ್ತಾನದ ಪರ ಘೋಷಣೆ ಮಾಡಿಲ್ಲ

**ಹಿಜಾಬ್‌ಗೆ ಆಕ್ಷೇಪಿಸಿ ಕೋಮು ದ್ವೇಷ ಸೃಷ್ಟಿ : ಹರಿಹರ ಮುಸ್ಲಿಂ ಸಮಾಜ ಒಕ್ಕೂಟದ ಹೇಳಿಕೆ**

ಹರಿಹರ, ಫೆ. 10 - ನಗರದ ಪೊಲೀಸ್ ಠಾಣೆ ಎದುರು ಪಾಕಿಸ್ತಾನ ಜಿಂದಾಬಾದ್ ಎಂದು ಘೋಷಣೆ ಮಾಡಿರುವುದಾಗಿ ಕೆಲವರು ಮಾಡಿರುವ ಆರೋಪ ಆಧಾರ ರಹಿತ ಎಂದಿರುವ ಹರಿಹರ ಮುಸ್ಲಿಂ ಸಮಾಜ ಒಕ್ಕೂಟ, ಹಿಜಾಬ್ ಧರಿಸುವುದಕ್ಕೆ ಆಕ್ಷೇಪ ವ್ಯಕ್ತಪಡಿಸಿ ಕೋಮು ದ್ವೇಷ ಸೃಷ್ಟಿಸಲಾಗುತ್ತಿದೆ ಎಂದು ಆಕ್ಷೇಪಿಸಿದೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿರುವ ಒಕ್ಕೂಟದ ಅಧ್ಯಕ್ಷ ಹಾಜಿ ಅಲಿ ಖಾನ್, ನಗರದ ಶಾಂತಿ ಭಂಗಕ್ಕೆ ಕಾರಣವಾಗಿರುವ ಸಂಘ ಪರಿವಾರದ ಕಾರ್ಯಕರ್ತರ ವಿರುದ್ಧ ಕಾನೂನು ಕ್ರಮಕ್ಕೆ ಆಗ್ರಹಿಸಿದ್ದಾರೆ.

ಮುಸ್ಲಿಂ ಯುವಕರು ಪಾಕಿಸ್ತಾನ್ ಜಿಂದಾಬಾದ್ ಎಂದು ಘೋಷಣೆ ಮಾಡಿದ್ದಾರೆಂದು ಕೆಲವು ಕೋಮುವಾದಿ ಗಳು ಸಾಮಾಜಿಕ ಜಾಲತಾಣಗಳಲ್ಲಿ ನಕಲಿ ವಿಡಿಯೋಗಳನ್ನು ಪ್ರಸಾರ ಮಾಡಿದ್ದಾರೆ. ಇದನ್ನು ಖಂಡಿಸುವುದಾಗಿ ಹೇಳಿರುವ ಖಾನ್, ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಹಿಜಾಬ್ ವಿಷಯದಲ್ಲಿ ಗಲಭೆ ಸೃಷ್ಟಿ ಮಾಡಿದವರ ವಿರುದ್ಧ ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ಆಗ್ರಹಿಸಿದ್ದಾರೆ.

ಮಾಜಿ ನಗರಸಭೆ ಸದಸ್ಯ ಏಜಾಜ್ ಆಹ್ಮದ್, ಜೆಡಿಎಸ್‌ನ ಆಸೀಫ್ ಮಾತನಾಡಿದರು.

ನಗರಸಭೆ ಮಾಜಿ ಸದಸ್ಯ ಮಹಮ್ಮದ್ ಸಿಗ್ಬತ್ ಉಲ್ಲಾ ಮಾತನಾಡಿ, ಬಿಜೆಪಿ ಸರ್ಕಾರ ಆಡಳಿತ ಮಾಡುವಲ್ಲಿ ವಿಫಲವಾದ ಕಾರಣ ಕೋಮು ವಿಷ ಬೀಜ ಬಿತ್ತುವ ಮೂಲಕ ಚುನಾವಣೆಯಲ್ಲಿ ಲಾಭವನ್ನು ಪಡೆಯುವ ಹುನ್ನಾರ ಮಾಡುತ್ತಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ನಗರಸಭೆ ಸದಸ್ಯರಾದ ಆರ್.ಸಿ. ಜಾವೇದ್, ದಾದಾಖಲಂದರ್, ಅಲ್ತಾಫ್, ಸೈಯದ್ ಅಲೀಂ, ಮುಖಂಡರಾದ ಸೈಯದ್ ಆಸೀಫ್ ಜುನೇದಿ, ಮದ್ದಿ ಮನಸ್ಸೂರು, ದಾದಾಪೀರ್ ಭಾನುವಳ್ಳಿ, ಆಸೀಫ್ ಕನವಳ್ಳಿ, ಹಬೀಬ್, ಸಿಕಂದರ್, ರೆಮುಮತ್ ಉಲ್ಲಾ ರಹೆಮಾನ್, ಇಲಿಯಾಸ್ ಆಹ್ಮದ್, ಮತ್ತಿತರರು ಉಪಸ್ಥಿತರಿದ್ದರು.

## ಹೊನ್ನಾಳಿ : ಇಂದಿನಿಂದ 104ನೇ ದಿಂಡಿ ಮಹೋತ್ಸವ



ದೊಡ್ಡಪೇಟೆ ಪಾಂಡುರಂಗ ದೇವಸ್ಥಾನದಲ್ಲಿ ಇಂದಿನಿಂದ 3 ದಿನ 104ನೇ ದಿಂಡಿ ಮಹೋತ್ಸವ ನಡೆಯಲಿದೆ. ಇಂದು ಸಂಜೆ 6 ಗಂಟೆಗೆ ನಾಮದೇವ ಸಿಂಪಿ ಸಮಾಜ, ಜ್ಞಾನೇಶ್ವರಿ ವಿದ್ಯಾನಿಧಿ ಸಮಿತಿಯಿಂದ ಪ್ರತಿಭಾ ಪುರಸ್ಕಾರ ಸಮಾರಂಭ ನಡೆಯಲಿದ್ದು, ನಾಮದೇವ ಸಿಂಪಿ ಸಮಾಜದ ಅಧ್ಯಕ್ಷ ನಾಗರಾಜ ಮೂಳೆಕರ್ ಅಧ್ಯಕ್ಷತೆ ವಹಿಸಲಿದ್ದಾರೆ.

ಅತಿಥಿಗಳಾಗಿ ದಾವಣಗೆರೆ ವಿಶ್ವ ಹಿಂದೂ ಪರಿಷತ್‌ನ ಶಂಕರ ನಾರಾಯಣರಾವ್, ವಿಜಯಕುಮಾರ್ ರಾಕುಂಡಿ, ಹಾನಗಲ್ ಡಾ.ಲಿಂಗರಾಜ್ ಕಠಾರಿ, ಅರಬಗಟ್ಟೆ ಡಾ. ನರೇಂದ್ರ ಹೋವಳೆ, ಸಿಂಪಿ ಸಮಾಜದ ಉಪಾಧ್ಯಕ್ಷ ಜಗನ್ನಾಥರಾವ್ ಹೋವಳೆ, ಮುಖಂಡರಾದ ಪ್ರಹ್ಲಾದರಾವ್, ಸತ್ಯನಾರಾಯಣ ಕಠಾರಿ, ಪಾಂಡುರಂಗ ಹೋವಳೆ ಮತ್ತಿತರರು ಭಾಗವಹಿಸುವರು.

ನಾಳೆ ಶನಿವಾರ ರಾತ್ರಿ 10 ಗಂಟೆಗೆ ಆಕಾಶವಾಣಿ ಕಲಾವಿದರಾದ ಯಲ್ಲಾಪುರದ ಗಣಪತಿ ಹೆಗಡೆ ಅವರಿಂದ 'ಸಂತವಾಣಿ' ಕಾರ್ಯಕ್ರಮ ನಡೆಯಲ್ಲಿದ್ದು ನಂತರ ಅಖಂಡ ಜಾಗರಣೆ ಕಾರ್ಯಕ್ರಮ ನಡೆಯಲಿದೆ.

ದಿನಾಂಕ 13 ರ ಭಾನುವಾರ ಬೆಳಿಗ್ಗೆ 8 ಗಂಟೆಗೆ ವಿಠಲ ರುಖುಮಾಯಿ ದಿಂಡಿ ಉತ್ಸವದ ರಥೋತ್ಸವದ ಮೆರವಣಿಗೆ ನಡೆಯಲಿದೆ.

## ನಗರ - ಗ್ರಾಮಾಂತರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಆರ್.ಎಂ.ಸಿ. ಲಿಂಕ್ ರಸ್ತೆ, ಬಿ.ಟಿ. ಲೇಔಟ್, ಗುಜರಿ ಲೈನ್, ಬಂಬೂ ಬಜಾರ್, ಮಟ್ಟಿಕಲ್, ಬಿಡಿಓ ಕಛೇರಿ, ಇಮಾಮ್ ನಗರ, ಅಮರಪ್ಪನ ತೋಟ, ಆನೆಕೊಂಡ, ಎಲ್.ಬಿ.ಎಸ್. ನಗರ. ಟಿ.ಸಿ. ಲೇಔಟ್, ಬಿಟಿ ಲೇಔಟ್, ಕೆ.ಆರ್. ರಸ್ತೆ, ಇಮಾಮ್ ನಗರ, ಆನೆಕೊಂಡ, ಐನಳ್ಳಿ ಕಾಂಪೌಂಡ್, ಎಪಿಎಂಸಿ, ಭಾರತ್ ಕಾಲೋನಿ, ಶೇಖಪ್ಪ ನಗರ, ಹೆಚ್.ಕೆ.ಆರ್. ನಗರ, ಕಬ್ಬೂರು ಬಸಾಪುರ ನಗರ, ಅಣ್ಣಾ ನಗರ, ಬಸಾಪುರ ರಸ್ತೆ, ಗೋಶಾಲೆ, ಪಿ.ಬಿ. ರಸ್ತೆ, ರವಿ ಮಿಲ್ ಹಾಗೂ ಆವರಗೆರೆ, ಹೊನ್ನೂರು, ಐಗೂರು, ಮಲ್ಲಶೆಟ್ಟಿಹಳ್ಳಿ, ತೋಳಹುಣಸೆ, ದಾವಣಗೆರೆ ವಿಶ್ವವಿದ್ಯಾಲಯ, ಆಲೂರು, ಬಿ.ಜಿ.ಹಳ್ಳಿ, ಸಿದ್ದನೂರು, ಮಲ್ಲಾಪುರ, ಗುಡಾಳು, ಅಣಜಿ, ಕಿತ್ತೂರು, ಕಂದನಕೋವಿ, ಮೆಳ್ಳೇಕಟ್ಟೆ, ರೆಡ್ಡಿ ಕ್ಯಾಂಪ್, ಪುಟಗನಾಳು, ಶ್ರೀರಾಮ ನಗರ, ಕಾಡಜ್ಜಿ, ಬಸವನಾಳು, ನಾಗರಕಟ್ಟೆ ಹಾಗೂ ಸುತ್ತಮುತ್ತಲಿನ ಗ್ರಾಮಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 5 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

## ಅವಹೇಳನಕಾರಿ ಸ್ಟೇಟಸ್ : ಗುಂಪುಗಳ ಮಾರಾಮಾರಿ

ದಾವಣಗೆರೆ, ಫೆ.10- ಸಾಮಾಜಿಕ ಜಾಲತಾಣದಲ್ಲಿ ಅವಹೇಳನಕಾರಿ ಸ್ಟೇಟಸ್ ಹಾಕಿದ ಹಿನ್ನೆಲೆಯಲ್ಲಿ ಎರಡು ಕೋಮಿನವರ ನಡುವೆ ವಾಗ್ವಾದ, ಮಾರಾಮಾರಿಯಾಗಿ 6 ಮಂದಿ ಸೇರಿದಂತೆ ಓರ್ವ ಯುವಕ, ಒಬ್ಬ ವೃದ್ಧೆ ಗಂಭೀರವಾಗಿ ಗಾಯಗೊಂಡ ಘಟನೆ ಚನ್ನಗಿರಿ ತಾಲ್ಲೂಕಿನ ನಲ್ಲೂರು ಗ್ರಾಮದಲ್ಲಿ ಬುಧವಾರ ರಾತ್ರಿ ನಡೆದಿದೆ.

ಒಂದು ಕೋಮಿನವರು ರಾತ್ರೋರಾತ್ರಿ ಮಾರಕಾಸ್ತ್ರ ಹಿಡಿದು ಯುವಕನ ಮನೆಗೆ ನುಗ್ಗಿ ಹಲ್ಲೆ ಮಾಡಿದ್ದಾರೆ ಎನ್ನಲಾಗಿದೆ. ಪ್ರತಿಯಾಗಿ ಯುವಕನ ಕಡೆಯವರಿಂದ ಹಲ್ಲೆ ನಡೆದಿದೆ. ಈ ಗಲಾಟೆಯಿಂದ ವೃದ್ಧೆ ಹಾಗೂ ಯುವಕನಿಗೆ ಗಂಭೀರವಾಗಿ ಗಾಯವಾಗಿದೆ. ನಂತರ ಯುವಕ ಮತ್ತು ವೃದ್ದೆಗೆ ಚನ್ನಗಿರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗಿದೆ. ಹಲ್ಲೆಗೊಳಗಾದ ಇತರರನ್ನು ಚನ್ನಗಿರಿ ತಾಲ್ಲೂಕು ಆಸ್ಪತ್ರೆಗೆ ದಾಖಲಿಸಲಾಗಿದೆ.

ಗಲಾಟೆ ವಿಚಾರ ತಿಳಿದು ಸ್ಥಳಕ್ಕಾಗಮಿಸಿದ ಪೊಲೀಸರು ಹರಸಾಹಸಪಟ್ಟು ಪರಿಸ್ಥಿತಿ ತಿಳಿಗೊಳಿಸಿದ್ದಾರೆ. ಪೊಲೀಸರು ಎರಡೂ ಕೋಮಿನ ಮುಖಂಡರನ್ನು ಕರೆಸಿ ಸಭೆ ನಡೆಸಿದರು.

ಒಂದು ಕೋಮಿನ ಜನ ಮಾರಕಾಸ್ತ್ರ ಹಿಡಿದು, ಗುಂಪು ಗುಂಪಾಗಿ ಸಾಗುತ್ತಿರುವುದು, ಮನೆ ಮನೆಗಳಲ್ಲಿ ಇಣುಕಿ ನೋಡುವುದು, ಒಮ್ಮೆಗೆ ಜೋರಾಗಿ ಓಡಿ ಹೋದವರು, ಅಲ್ಲಿದ್ದ ಮನೆಗಳ ಜನರಿಂದ ಅದರಲ್ಲೂ ಮಕ್ಕಳು, ಯುವಕರು, ಮಹಿಳೆಯರಿಂದ ಪ್ರತಿರೋಧ ವ್ಯಕ್ತವಾಗುತ್ತಿದ್ದಂತೆಯೇ ಬಂದ ದಾರಿಯಲ್ಲೇ ದಿಕ್ಕಾಪಾಲಾಗಿ ಓಡಿ ಹೋಗುತ್ತಿರುವ ದೃಶ್ಯಗಳು ಅದೇ ಕೇರಿಯಲ್ಲಿದ್ದ ಸಿಸಿ ಕ್ಯಾಮೆರಾಗಳಲ್ಲಿ ಸೆರೆಯಾಗಿವೆ.

## ಗ್ರಾಮಾಂತರದಲ್ಲಿ ವಿದ್ಯುತ್ ವ್ಯತ್ಯಯ

ಆವರಗೆರೆ ವಿದ್ಯುತ್ ವಿತರಣಾ ಕೇಂದ್ರದ ಎಲ್ಲಾ 11 ಕೆವಿ ಮಾರ್ಗಗಳು, 66/11 ಕೆವಿ ಯರಗುಂಟೆ ವಿವಿ ಕೆಂದ್ರದ ಎಲ್ಲಾ 11 ಕೆವಿ ಮಾರ್ಗಗಳು ಮತ್ತು 66/11 ಕೆವಿ ಕಾಡಜ್ಜಿ ವಿದ್ಯುತ್ ವಿತರಣಾ ಕೇಂದ್ರದ ಎಲ್ಲಾ 11 ಕೆವಿ ಮಾರ್ಗಗಳಲ್ಲಿ ಇಂದು ವಿದ್ಯುತ್ ಪೂರೈಕೆ ಇರುವುದಿಲ್ಲ.

**ಕಾಣೆಯಾಗಿದ್ದಾರೆ**



ದಾವಣಗೆರೆ ತಾಲ್ಲೂಕು, ಚಿಕ್ಕ ಓಬಜ್ಜಿಹಳ್ಳಿ ಗ್ರಾಮದ **ಧರ್ಮನಾಯ್ಕ** ತಂದೆ **ರಾಮಾನಾಯ್ಕ**, 38 ವರ್ಷ ವಯಸ್ಸು ಇವರು 12.05.2014 ರಂದು ಮನೆಯಿಂದ ಕೆಲಸಕ್ಕೆಂದು ಹೋದವರು ಇದುವರೆಗೂ ಪುನಃ ಮನೆಗೆ ವಾಪಾಸ್ ಬಂದಿರುವುದಿಲ್ಲ . ಇವರು ಕನ್ನಡ, ಲಂಬಾಣಿ ಭಾಷೆ ಮಾತನಾಡುತ್ತಾರೆ. ಇವರನ್ನು ಯಾರಾದರೂ ನೋಡಿದಲ್ಲಿ ಹತ್ತಿರದ ಗ್ರಾಮಾಂತರ ಪೊಲೀಸ್ ಠಾಣೆಗಾಗಲೀ ಅಥವಾ ಈ ಕೆಳಗಿನ ಫೋನ್ ನಂಬರ್‌ಗೆ ತಿಳಿಸಬೇಕಾಗಿ ವಿನಂತಿ.

**ನಾಗರಾಜ ನಾಯ್ಕ: 96867 14502**

**ರೆಪ್ಕೋ ಹೋಮ್ ಫೈನಾನ್ಸ್ ಲಿಮಿಟೆಡ್**
Repco Home Finance We Value Your Dream
CIN No. L65922TN2000TLC044655
ಫೋ : 08192-232836, ಮೊ : 9342440967, 9901009929, 7676823234, 9036368349

**ಗೃಹ ಸಾಲ ಮೇಳ**

ಸರಳ ವಿಧಾನದಲ್ಲಿ ಸಾಲ ಮಂಜೂರಾತಿ

ದಿ : 11-02-2022 ಶುಕ್ರವಾರ ಮತ್ತು ದಿ: 12-02-2022 ಶನಿವಾರ
ಬೆಳಿಗ್ಗೆ 10 ರಿಂದ ಸಂಜೆ 5 ರ ವರೆಗೆ

ಸ್ಥಳ : ನಂ. 78-7ಎ, ಮೊದಲನೇ ಮಹಡಿ, ನೀಲ್‌ಕಮಲ್ ಫರ್ನಿಚರ್ ಶೋ ರೂಂ ಪಕ್ಕ ರೈತರಬೀದಿ, ಪಿ.ಜೆ. ಬಡಾವಣೆ, ಎ.ವಿ.ಕೆ. ಕಾಲೇಜ್ ರಸ್ತೆ, ದಾವಣಗೆರೆ - 577 002.

ಈ ಕೆಳಕಂಡ ಸಾಲಗಳಿಗೆ ಮಂಜೂರಾತಿ ನೀಡಲಾಗುವುದು :
- ಖಾಲಿ ನಿವೇಶನ /ಮನೆ/ಫ್ಲಾಟ್ ಖರೀದಿಸಲು
- ಮನೆ / ವಾಣಿಜ್ಯ ಕಟ್ಟಡ ಕಟ್ಟಲು
- ಮನೆ ನವೀಕರಣಕ್ಕೆ
- ಹೆಚ್ಚಿನ ಬಡ್ಡಿದರದ ಅಸ್ತಿತ್ವದಲ್ಲಿರುವ ಸಾಲವನ್ನು ಕಡಿಮೆ ಬಡ್ಡಿಗೆ ವರ್ಗಾಯಿಸಲು ಹಾಗೂ ಹೆಚ್ಚುವರಿ ಸಾಲ ಪಡೆಯಲು
- ಅಡಮಾನ ಸಾಲ

ಮೇಳದ ಪ್ರಯುಕ್ತ ವಿಶೇಷ ರಿಯಾಯಿತಿ
ಗೃಹ ಸಾಲ 7.15%* ರಿಂದ ಪ್ರಾರಂಭ

ಆಡಳಿತಾತ್ಮಕ ಶುಲ್ಕದಲ್ಲಿ ಸಂಪೂರ್ಣ ಮನ್ನಾ
ಸಂಸ್ಕರಣ ಶುಲ್ಕದಲ್ಲಿ ಶೇ. 0.25 % ವಿಶೇಷ ರಿಯಾಯಿತಿ

ಆದಾಯ ಪತ್ರ ಹಾಗೂ ಆಸ್ತಿಯ ವಿವರಗಳೊಂದಿಗೆ ಭೇಟಿ ನೀಡಿ.

**ಕರ್ನಾಟಕ ಗ್ರಾಮೀಣ ಬ್ಯಾಂಕ್**

(ಸರ್ಕಾರಿ ಸ್ವಾಮ್ಯದ ಷೆಡ್ಯೂಲ್ಡ್ ಬ್ಯಾಂಕ್) ಪ್ರವರ್ತಕರು : ಕೆನರಾ ಬ್ಯಾಂಕ್
ಪ್ರಧಾನ ಕಛೇರಿ : ಸಂಗನಕಲ್ಲು ರಸ್ತೆ, ಗಾಂಧಿನಗರ, ಬಳ್ಳಾರಿ-583 103 (ಕರ್ನಾಟಕ)

**ಪ್ರಾದೇಶಿಕ ಕಚೇರಿ : ನಂ.496/66, ಸಂಕೋಳ್ ಪ್ಲಾಜಾ, 2ನೇ ಮಹಡಿ ನಾಗನೂರು ರಸ್ತೆ, ಶಾಮನೂರು, ದಾವಣಗೆರೆ-577 004**

ಫೋನ್: 08192 - 223913, 233632 e-mail: rodvg@kgbk.in

**ಚಿನ್ನಾಭರಣಗಳ ಬಹಿರಂಗ ಹರಾಜು**

ಈ ಕೆಳಕಂಡ ಮಹನೀಯರು ಕರ್ನಾಟಕ ಗ್ರಾಮೀಣ ಬ್ಯಾಂಕ್‌ನ ಶಾಖೆಯಲ್ಲಿ ತಮ್ಮ ಚಿನ್ನಾಭರಣ ಆಧಾರದ ಸಾಲ ಪಡೆದಿದ್ದು, ವಾಯಿದೆ ಪ್ರಕಾರ ಸಾಲ ಮರುಪಾವತಿ ಮಾಡದೇ ಇದ್ದ ಕಾರಣ, ಇವರಿಗೆ ರಿಜಿಸ್ಟರ್ಡ್ ಅಂಚೆ ಮುಖಾಂತರ ಸಾಲಮರುಪಾವತಿ ಮಾಡುವಂತೆ ಕೋರಿ ಕಳುಹಿಸಿದ ನೋಟಿಸ್ ಜಾರಿಯಾಗಿರುತ್ತದೆ. ಆದರೂ ಸಾಲ ಮರುಪಾವತಿ ಮಾಡಲು ಯಾವುದೇ ಕ್ರಮ ಕೈಗೊಳ್ಳದೇ ಇರುವುದರಿಂದ, ಅವರಿಗೆ ಈ ಮೂಲಕ ತಿಳಿಸುವುದೇನೆಂದರೆ, ತಾರೀಖು 23-02-2022 ರಂದು ಅಥವಾ ಅದಕ್ಕೆ ಮುಂಚೆ ಬ್ಯಾಂಕಿಗೆ ಭೇಟಿ ಕೊಟ್ಟು ಸಂಪೂರ್ಣ ಹಣ, ಬಡ್ಡಿ ಹಾಗೂ ಇತರೆ ಖರ್ಚುಗಳನ್ನು ಮರುಪಾವತಿ ಮಾಡತಕ್ಕದ್ದು, ಇಲ್ಲವಾದಲ್ಲಿ ತಾವು ಒತ್ತೆ ಇಟ್ಟ ಆಭರಣಗಳನ್ನು ತಾರೀಖು 23-02-2022 ರಂದು ಬೆಳಿಗ್ಗೆ 11.00 ಗಂಟೆಗೆ ಅಥವಾ ಬ್ಯಾಂಕಿಗೆ ಸೂಕ್ತವಾದ ಇನ್ನಾವುದೇ ದಿನದಂದು ನೋಟೀಸು ಕೊಡದೇ ಶಾಖೆಯ ಆವರಣದಲ್ಲಿ ಬಹಿರಂಗವಾಗಿ ಯಾ ಖಾಸಗಿಯಾಗಿ ಹರಾಜು ಮಾಡಲಾಗುವುದು. ಸದರಿ ಹರಾಜಿನಿಂದ ಬಂದ ಮೊತ್ತವು ತಮ್ಮ ಸಾಲವನ್ನು ಸಂಪೂರ್ಣ ತೀರುವಳಿ ಮಾಡಲು ವಿಫಲವಾದಲ್ಲಿ ತಾವು ವೈಯಕ್ತಿಕವಾಗಿ ಹೊಣೆಗಾರರಾಗಿರುತ್ತೀರಿ ಹಾಗೂ ಹರಾಜಿಗೆ ತಗಲುವ ಎಲ್ಲಾ ವೆಚ್ಚಕ್ಕೂ ನೀವೇ ಹೊಣೆಗಾರರೆಂದು ತಿಳಿಯಿರಿ.

**ಶಾಖೆ: ಕೊಕ್ಕನೂರು, ಹರಿಹರ ತಾ||. ದಾವಣಗೆರೆ ಜಿಲ್ಲೆ. ಮೊ: 7760518378**

| ಕ್ರ. ಸಂ. | ಸಾಲಗಾರರ ಹೆಸರು ಮತ್ತು ವಿಳಾಸ | ಸಾಲದ ಸಂಖ್ಯೆ | ಸಾಲದ ಬಾಬ್ತು + ಬಡ್ಡಿ |
|---|---|---|---|
| 1 | ಶ್ರೀಮತಿ ದೇವಿರಮ್ಮ ಕೋಂ ಸಿದ್ದಪ್ಪ, ಕೊಕ್ಕನೂರು | 40677302067519 | 11,263-50 |
| 2 | ಶ್ರೀ ಹನುಮಂತಪ್ಪ ಬಿನ್. ಹನುಮಪ್ಪ, ಕೊಕ್ಕನೂರು | 40677302012420 | 65,879-00 |
| 3 | ಶ್ರೀಮತಿ ಶಾಂತಮ್ಮ ಕೋಂ. ಗದಿಗೆಪ್ಪ, ಹಿಂಡಸಘಟ್ಟ | 40677302021720 | 1,03,506-00 |
| 4 | ಶ್ರೀ ನಿಂಗಪ್ಪ ಹುಲ್ಲೇರ ಬಿನ್. ಹನುಮಂತಪ್ಪ, ಕೊಕ್ಕನೂರು | 40677302072720 | 1,13,231-50 |
| 5 | ಶ್ರೀ ಚೇತನ ಬಿ.ಹೆಚ್. ಬಿನ್.ಹನುಮಗೌಡ, ಹಿಂಡಸಘಟ್ಟ | 40677302073920 | 2,06,606-50 |
| 6 | ಶ್ರೀ ಮಹೇಶ್ವರಪ್ಪ ಬಿನ್.ಬಸಪ್ಪ, ಹಿಂಡಸಘಟ್ಟ | 40677302076220 | 46,922-50 |
| 7 | ಶ್ರೀ ಬಸವರಾಜ್ ಬಿನ್. ಮೂರ್ತೆಪ್ಪ, ಕೊಕ್ಕನೂರು | 40677302090420 | 66,066-50 |
| 8 | ಶ್ರೀಮತಿ ಕಮಲಮ್ಮ ಕೋಂ. ಭೀಮಪ್ಪ, ಕೊಕ್ಕನೂರು | 40677302093020 | 1,39,480-50 |
| 9 | ಶ್ರೀ ಸಂತೋಷ ಬಿನ್. ರಾಮನಗೌಡ, ಕೊಕ್ಕನೂರು | 40677302093720 | 10,016-50 |
| 10 | ಶ್ರೀ ಹನುಮಂತಪ್ಪ ಬಿನ್. ಕೊಟ್ರಪ್ಪ, ಕೊಕ್ಕನೂರು | 40677302094520 | 98,724-50 |
| 11 | ಶ್ರೀಮತಿ ಕುಸುಮಮ್ಮ ಕೋಂ. ಮಹದೇವಪ್ಪ, ಕೊಕ್ಕನೂರು | 40677302096420 | 33,197-00 |
| 12 | ಶ್ರೀಮತಿ ಕರಿಬಸಮ್ಮ ಕೋಂ. ಹನುಮಪ್ಪ, ಜಿ.ಟಿ. ಕಟ್ಟೆ | 40677302096820 | 1,69,032-50 |
| 13 | ಶ್ರೀ ಹನುಮಂತಪ್ಪ ಬಿನ್. ಹಾಲಪ್ಪ, ಕೊಕ್ಕನೂರು | 40677302097220 | 85,661-50 |
| 14 | ಶ್ರೀಮತಿ ಸಾಕಮ್ಮ ಕೋಂ. ತಿಪ್ಪೇಸ್ವಾಮಿ, ಕೊಕ್ಕನೂರು | 40677302097620 | 32,209-50 |
| 15 | ಶ್ರೀಮತಿ ಗಂಗಮ್ಮ ಕೋಂ. ಸಿದ್ದನಗೌಡ, ಕೊಕ್ಕನೂರು | 40677302098020 | 1,07,006-50 |
| 16 | ಶ್ರೀ ಮಲ್ಲಪ್ಪ ಬೂದಿಹಾಳ್ ಬಿನ್. ಕಣ್ಣಪ್ಪ, ಹಲ್ಲಿಹಾಳ್ | 40677302099120 | 40,799-50 |
| 17 | ಶ್ರೀ ರುದ್ರೇಶ್ ತಿಮ್ಮನಕಟ್ಟೆ ಬಿನ್. ಹನುಮಂತಪ್ಪ, ಕೊಕ್ಕನೂರು | 40677302099320 | 32,189-50 |
| 18 | ಶ್ರೀಮತಿ ಶಾಂತ ಹೆಚ್.ಜಿ. ಕೋಂ. ಹನುಮಗೌಡ, ಕೊಕ್ಕನೂರು | 40677302101820 | 2,13,017-50 |
| 19 | ಶ್ರೀ ಸಿದ್ದಪ್ಪ ಡಿ.ಜಿ. ಬಿನ್. ಗೋವಿಂದಪ್ಪ, ಕೊಕ್ಕನೂರು | 40677302102420 | 30,840-50 |
| 20 | ಶ್ರೀಮತಿ ಅನಸೂಯಮ್ಮ ಕೋಂ. ಕೊಟ್ರಪ್ಪ, ಕೊಕ್ಕನೂರು | 40677302103120 | 98,654-50 |
| 21 | ಶ್ರೀಮತಿ ಗದಿಗೆಮ್ಮ ಕೋಂ. ದೇವೇಂದ್ರಪ್ಪ, ಕೊಕ್ಕನೂರು | 40677302104220 | 41,831-50 |
| 22 | ಶ್ರೀಮತಿ ಗೀತಾ ಕೋಂ. ಶೇಖರಪ್ಪ, ಮೂಗಿನಗುಂಡಿ | 40677302105720 | 46,937-50 |
| 23 | ಶ್ರೀ ದೇವರಾಜ್ ಬಿನ್. ಬಸಪ್ಪ, ಮೂಗನಗುಂಡಿ | 40677302106420 | 39,476-50 |
| 24 | ಶ್ರೀಮತಿ ವನಜಾಕ್ಷಮ್ಮ ಕೋಂ. ಮಹದೇವಪ್ಪ, ಕೊಕ್ಕನೂರು | 40677302107020 | 53,279-50 |


ಸ್ಥಳ : ದಾವಣಗೆರೆ
ದಿನಾಂಕ : 11-02-2022

ಸಹಿ/- ಕರ್ನಾಟಕ ಗ್ರಾಮೀಣ ಬ್ಯಾಂಕ್
ಪ್ರಾದೇಶಿಕ ಕಛೇರಿ,ದಾವಣಗೆರೆ.

**ಮಾಂತ್ರಿಕ ಮೋಡಿ ಬೆಟ್ಟಪ್ಪ ಜ್ಯೋತಿಷ್ಯರು**
Most Populr Astrologer

ಉಚಿತ ಭವಿಷ್ಯ ಖಚಿತ ಪರಿಹಾರ, ಫೋನ್ ಮೂಲಕ ಸಂಪರ್ಕಿಸಿ
ನಂ.1 ವಶೀಕರಣ ಸ್ಪೆಷಲಿಸ್ಟ್, ನೀವು ಇಷ್ಟಪಟ್ಟವರು ನಿಮ್ಮಂತಾಗಲು
ನಿಮ್ಮ ಸಮಸ್ಯೆಗಳೇನು ? ನಿಮ್ಮ ಸಂಕಷ್ಟಗಳೇನು ? ನಮ್ಮಲ್ಲಿ ಕೇಳಿ ತಿಳಿಯಿರಿ
ದೇವಿ ಉಪಾಸಕರು, ಸರ್ವಮಂತ್ರ ವಿದ್ಯೆಯಿಂದ ನಿಮ್ಮ ಸಮಸ್ಯೆಗಳಾದ ವಿದ್ಯೆ, ಉದ್ಯೋಗ, ಮದುವೆ ವಿಳಂಬ, ಮಾಟ-ಮಂತ್ರ, ಯಂತ್ರ-ಮಂತ್ರ, ಸ್ತ್ರೀ-ಪುರುಷ ವಶೀಕರಣ, ಲೈಂಗಿಕ ಗುಪ್ತ ಮಾನಸಿಕ ಚಿಂತೆ, ದಾಂಪತ್ಯ ಸಮಸ್ಯೆ, ಬಲಿಷ್ಠ ಗಿಡಮೂಲಿಕೆಗಳಿಂದ ಪರಿಹಾರ ಮಾಡಿತ್ತಾರೆ.

ವಿ.ಸೂ. : ನಿಮ್ಮ ಯಾವುದೇ ಸಮಸ್ಯೆಗಳಿಗೆ 9 ದಿನಗಳೊಳಗೆ 100% ಪರಿಹಾರ ಶತಸಿದ್ದ. ನಿಮ್ಮ ದಾವಣಗೆರೆ ನಗರದಲ್ಲಿ ಇಂದೇ ಭೇಟಿ ಕೊಡಿ
ಮೊಬೈಲ್ : 89716 99826



**ಸಾರ್ವಜನಿಕ ಪ್ರಕಟಣೆ**

ಈ ಮೂಲಕ ಸಾರ್ವಜನಿಕರಲ್ಲಿ ತಿಳಿಯಪಡಿಸುವುದೇನೆಂದರೆ **ಟಿ.ಎಂ. ಮಂಜುಳ** w/o **ಬಿ.ಎಂ. ಮಹಾರುದ್ರಯ್ಯ** ಆದ ನಾನು ನನ್ನ ಮಕ್ಕಳಾದ **ಬಿ.ಎಂ. ಪರೀಕ್ಷಿತ್** ಮತ್ತು **ಬಿ.ಎಂ. ವಿನಯ್** ಇವರ ಪರವಾಗಿ ನನ್ನ ಗಂಡನಾದ **ಬಿ.ಎಂ. ಮಹಾರುದ್ರಯ್ಯ ಹಾಗೂ ಇತರರ** ವಿರುದ್ಧ ಈ ಕೆಳಕಂಡ ಷೆಡ್ಯೂಲ್ ಸ್ವತ್ತುಗಳ ಪಾಲು ವಿಭಾಗಕ್ಕಾಗಿ ದಾವಣಗೆರೆ ಹೆಚ್ಚುವರಿ ಸಿವಿಲ್ (ಕಿ.ವಿ) ನ್ಯಾಯಾಲಯದಲ್ಲಿ ಅಸಲು ದಾವೆ ಸಂಖ್ಯೆ 495/11ನ್ನು ಸಲ್ಲಿಸಿದ್ದು ಸದರಿ ದಾವೆಯನ್ನು ಮಾನ್ಯ ನ್ಯಾಯಾಲಯವು ದಿನಾಂಕ 31.10.2019 ರಂದು ಪುರಸ್ಕರಿಸಿ ನನ್ನ ಪರ ಆದೇಶ ಮಾಡಿರುತ್ತದೆ.

ಸದರಿ ಆದೇಶದ ವಿರುದ್ಧ **ಮಹಾರುದ್ರಯ್ಯ & ಇತರರು** ಅಪೀಲನ್ನು ದಾವಣಗೆರೆ 1ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ **ಅಪೀಲ್ ಸಂಖ್ಯೆ 104/19**ನ್ನು ಸಲ್ಲಿಸಿದ್ದು ಸದರಿ ಅಪೀಲು ದಾವೆಯು ವಿಚಾರಣೆ ಹಂತದಲ್ಲಿರುತ್ತದೆ. ಆದ್ದರಿಂದ ಈ ಕೆಳಕಂಡ ಸ್ವತ್ತನ್ನು ಬೇರೆ ಯಾರಾದರೂ ಬಿ.ಎಂ. ಮಹಾರುದ್ರಯ್ಯ ಹಾಗು ಇತರರಿಂದ ಖರೀದಿ ಮಾಡಬಾರದಾಗಿ ಸಾರ್ವಜನಿಕರಲ್ಲಿ ತಿಳಿಯಪಡಿಸುತ್ತೇನೆ. ಒಂದು ವೇಳೆ ಯಾರಾದರೂ ಖರೀದಿ/ಕ್ರಯದ ಕರಾರು/ಇತರೆ ವ್ಯವಹಾರ ಮಾಡಿದ್ದಲ್ಲಿ ನಾನಾಗಲೀ, ನನ್ನ ಮಕ್ಕಳಾಗಲೀ ಯಾವುದೇ ರೀತಿಯಿಂದ ಹೊಣೆಗಾರರಾಗಿರುವುದಿಲ್ಲ.

**ಷೆಡ್ಯೂಲ್**

ದಾವಣಗೆರೆ ತಾಲ್ಲೂಕು ಮಾಯಕೊಂಡ ಹೋಬಳಿ ಬಾಡ ಗ್ರಾಮದ ಸರ್ವೆ ನಂ.ಗಳು
1) 9/1 = 7 ಎಕರೆ 14 ಗುಂಟೆ, 2) 11- 4 ಎಕರೆ 11 ಗುಂಟೆ, 3)54/P2 - 2 ಎಕರೆ 13 ಗುಂಟೆ, 4) 10/2P2 - 1 ಎಕರೆ 3½ ಗುಂಟೆ, 5) 22/2 - 3 ಎಕರೆ 7 ಗುಂಟೆ, 6) 14/2 - 26 ಗುಂಟೆ, 7) 73/P- 20 ಗುಂಟೆ

ಸಹಿ/-
ಎನ್. ರಾಮದಾಸ್, ವಾದಿ ಪರ ವಕೀಲರ ದಾವಣಗೆರೆ





# ಸಮಸ್ಯೆಯ ಶಾಶ್ವತ ಪರಿಹಾರದತ್ತ ಅಶೋಕ ರಸ್ತೆ

## 1 ತಿಂಗಳಲ್ಲಿ ರಸ್ತೆ ಸಂಚಾರಕ್ಕೆ ಮುಕ್ತ: ಪಾಲಿಕೆ ಮೇಯರ್ ವೀರೇಶ್ ಭರವಸೆ



ದಾವಣಗೆರೆ, ಫೆ. 10- ನಗರದ ಮಹಾತ್ಮ ಗಾಂಧಿ ವೃತ್ತದಿಂದ ಅಶೋಕ ಚಿತ್ರಮಂದಿರದ ಕಡೆ ಹೋಗುವ ರಸ್ತೆಯಲ್ಲಿ ಪೈಪ್ ಲೈನ್ ಅಳವಡಿಸುವ ಕಾಮಗಾರಿ ನಡೆಯುತ್ತಿದೆ.

ಖಾಸಗಿ ಬಸ್ ನಿಲ್ದಾಣದಿಂದ ಮಳೆ ನೀರು ಹರಿಯುವ ಪೈಪ್ ಲೈನ್ ಕಾಮಗಾರಿ ಸದ್ಯ ಈ ರಸ್ತೆಯಲ್ಲಿ ನಡೆಯುತ್ತಿದ್ದು, ನಂತರ ಮಹಾನಗರ ಪಾಲಿಕೆಯಿಂದ ಡ್ರೈನೇಜ್ ಕೆಲಸ ನಡೆಯಲಿದೆ. ಇದಾದ ನಂತರ ಸ್ಮಾರ್ಟ್ ಸಿಟಿ ಯೋಜನೆಯಡಿ ಸಿಮೆಂಟ್ ರಸ್ತೆ ನಿರ್ಮಾಣ ಕಾರ್ಯ ನಡೆಯಲಿದೆ ಎಂದು ಪಾಲಿಕೆ ಮೇಯರ್ ಎಸ್.ಟಿ. ವೀರೇಶ್ ತಿಳಿಸಿದ್ದಾರೆ.

ಸಿಮೆಂಟ್ ರಸ್ತೆ ನಿರ್ಮಿಸಿ, ಫುಟ್ ಪಾತ್, ಬೀದಿ ದೀಪ ಅಳವಡಿಕೆ ಕಾರ್ಯಗಳು ನಡೆದು ಎರಡು ದಶಕಗಳಿಂದ ಇದ್ದ ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸಲಾಗುತ್ತಿದೆ. ಇಷ್ಟೊತ್ತಿಗೆ ಪೈಪ್ ಲೈನ್ ಅಳವಡಿಕೆ ಕಾಮಗಾರಿ ಮುಗಿಯಬೇಕಿತ್ತು. ಆದರೆ ಪವರ್ ಕೇಬಲ್ ಸಮಸ್ಯೆ, ಡ್ರೈನೇಜ್ ವಾಟರ್ ಲೈನ್ ಸಮಸ್ಯೆಗಳು ಎದುರಾಗಿದ್ದರಿಂದ ತಡವಾಗುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಆದಷ್ಟು ಶೀಘ್ರ ಕಾಮಗಾರಿಗಳನ್ನು ಮುಗಿಸಿ ರಸ್ತೆಯನ್ನು ಸಂಚಾರಕ್ಕೆ ಮುಕ್ತ ಮಾಡಲಾಗುವುದು ಎಂದರು.

ದಾವಣಗೆರೆಯ ಹಳೆಯ ಹಾಗೂ ಹೊಸ ನಗರಗಳಿಗೆ ಸಂಪರ್ಕ ಕಲ್ಪಿಸುವಲ್ಲಿ ಈ ರಸ್ತೆ ಮುಖ್ಯರಸ್ತೆಯಾಗಿದೆ. ಅಷ್ಟೇ ಅಲ್ಲ, ಮಂಡಿಪೇಟೆ ಸೇರಿದಂತೆ ಮಾರುಕಟ್ಟೆ ಪ್ರದೇಶಗಳಿಗೆ ತೆರಳುವವರು ಈ ಭಾಗದಿಂದಲೇ ಹೆಚ್ಚಾಗಿ ಸಂಚರಿಸುತ್ತಾರೆ. ಅಲ್ಲದೇ ಹಲವಾರು ಚಿತ್ರಮಂದಿರಗಳಿರುವುದರಿಂದಲೂ ಇಲ್ಲಿ ವಾಹನಗಳ ಸಂಚಾರ ಹೆಚ್ಚು.

ಕಳೆದ ಎರಡು ದಶಕಗಳಿಂದ ಈ ರಸ್ತೆ ಗುಂಡಿಗಳ ರಸ್ತೆ ಎಂದೇ ಹೆಸರು ಪಡೆದಿತ್ತು. ಮಳೆ ಬಂದಾಗಂತೂ ವಾಹನ ಸವಾರರಿಗೆ ಸಂಚಾರ ದುಸ್ತರವಾಗಿತ್ತು. ಕೊನೆ ಪಕ್ಷ ಗುಂಡಿಗಳನ್ನಾದರೂ ಮುಚ್ಚಿಸಿ ಎಂಬ ಸಾರ್ವಜನಿಕರ ಕೂಗು ಹೆಚ್ಚಾದ ಹಿನ್ನೆಲೆಯಲ್ಲಿ ಪಾಲಿಕೆ ಮೇಯರ್ ಎಸ್.ಟಿ. ವೀರೇಶ್ ಅವರು ಮಹಾನಗರ ಪಾಲಿಕೆ, ಸ್ಮಾರ್ಟ್ ಸಿಟಿ ಹಾಗೂ ರೈಲ್ವೇ ಇಲಾಖೆಯ ಎಂಜಿನಿಯರ್‌ಗಳೊಂದಿಗೆ ಪರಿಶೀಲನೆ ನಡೆಸಿ ಚರ್ಚಿಸಿ ಕಾಮಗಾರಿಗೆ ಚಾಲನೆ ನೀಡಿದ್ದರು.

ಸುಮಾರು 18 ಮೀಟರ್ ಅಗಲ, 80 ಮೀಟರ್ ಉದ್ದದ ಈ ರಸ್ತೆಯನ್ನು ಲೋಕೋಪಯೋಗಿ ಇಲಾಖೆಯಿಂದ ತಾತ್ಕಾಲಿಕವಾಗಿ ರಿಪೇರಿ ಮಾಡಿಸಲಾಗಿತ್ತಾದರೂ. ಕೆಲವೇ ದಿನಗಳಲ್ಲಿ ರಸ್ತೆ ತನ್ನ ಮೊದಲ ಸ್ವರೂಪಕ್ಕೆ ಬದಲಾಗಿತ್ತು.

ಒಂದು ಕಡೆ ರೈಲ್ವೇ ಗೇಟ್ ಸಮಸ್ಯೆ ಮತ್ತೊಂದು ಕಡೆ ರಸ್ತೆಯಲ್ಲಿನ ಗುಂಡಿಗಳ ಸಮಸ್ಯೆ ಎದುರಿಸುತ್ತಿದ್ದ ವಾಹನ ಸವಾರರು ಈ ಸಮಸ್ಯೆಗೆ ಮುಕ್ತಿಯೇ ಇಲ್ಲವೇ? ಎಂದು ಪ್ರಶ್ನಿಸುತ್ತಿದ್ದರು. ನಗರ ಸ್ಮಾರ್ಟ್ ಸಿಟಿ ಯೋಜನೆಗೆ ಆಯ್ಕೆಯಾಗಿದ್ದು, ಸಾವಿರಾರು ಕೋಟಿ ರೂ. ಅನುದಾನ ಇದ್ದರೂ ಇದೊಂದು ತುಂಡು ರಸ್ತೆಗೆ ಮಾತ್ರ ದುರಸ್ತಿ ಭಾಗ್ಯ ಕೂಡಿರಲಿಲ್ಲ. ಆದರೆ ಇದೀಗ ಪಾಲಿಕೆಯಿಂದ ದುರಸ್ತಿ ಕಾಮಗಾರಿ ನಡೆಯುತ್ತಿರುವುದು ಸಂತಸದ ವಿಚಾರ. ಆದರೆ ಆದಷ್ಟು ಶೀಘ್ರ ಕಾಮಗಾರಿ ಮುಗಿಸಿ ರಸ್ತೆ ಸಂಚಾರಕ್ಕೆ ಅವಕಾಶ ಮಾಡಿಕೊಡಿ ಎಂಬುದು ಸಾರ್ವಜನಿಕರ ಒತ್ತಾಯವಾಗಿದೆ.

# ಧರಣಿ ಸತ್ಯಾಗ್ರಹ ಆರಂಭಿಸಿದ ರಾಜನಹಳ್ಳಿ ಶ್ರೀ



ಬೆಂಗಳೂರು, ಫೆ.10- ಎಸ್ಟಿ ಮೀಸಲಾತಿ ಹೆಚ್ಚಳ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ರಾಜನಹಳ್ಳಿಯ ವಾಲ್ಮೀಕಿ ಗುರುಪೀಠದ ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ ಗುರುವಾರ ಬೆಳಿಗ್ಗೆಯಿಂದ ಅಹೋರಾತ್ರಿ ಧರಣಿ ಸತ್ಯಾಗ್ರಹ ಆರಂಭಿಸಿದ್ದಾರೆ.

ವಿಧಾನಸೌಧದ ಬಳಿಯ ವಾಲ್ಮೀಕಿ ಪುತ್ಥಳಿಗೆ ಮತ್ತು ಅಂಬೇಡ್ಕರ್ ಪ್ರತಿಮೆ ಮಾಲಾರ್ಪಣೆ ಮಾಡಿದ ಶ್ರೀಗಳು ಅಲ್ಲಿಂದ ನೇರವಾಗಿ ಫ್ರೀಡಂ ಪಾರ್ಕ್‌ಗೆ ಆಗಮಿಸಿ ಧರಣಿ ಸತ್ಯಾಗ್ರಹಕ್ಕೆ ಕುಳಿತರು.

ಈ ವೇಳೆ ಪತ್ರಕರ್ತರೊಂದಿಗೆ ಮಾತನಾಡಿದ ಶ್ರೀಗಳು, ಬೇಡಿಕೆ ಈಡೇರುವವರಿಗೂ ಧರಣಿ ಸತ್ಯಾಗ್ರಹ ಬಿಡುವುದಿಲ್ಲ ಎಂಬ ಸ್ಪಷ್ಟ ಸಂದೇಶವನ್ನು ಸರ್ಕಾರಕ್ಕೆ ರವಾನಿಸಿದರು. ಧರಣಿ ಸ್ಥಳಕ್ಕೆ ಆಗಮಿಸಿದ ಶಾಸಕ ರಾಜೂಗೌಡ ಅವರು, ಶ್ರೀಗಳು ಬೇಡಿಕೆ ಸಂವಿಧಾನ ಬದ್ಧವಾಗಿದ್ದು, ಸರ್ಕಾರ ಕೂಡಲೇ ಗಮನ ಹರಿಸಬೇಕು.

ಈ ಕುರಿತು ಸೋಮವಾರದಿಂದ ಆರಂಭವಾಗುವ ವಿಧಾನಸಭೆ ಅಧಿವೇಶನದಲ್ಲೂ ಮಾತನಾಡುತ್ತೇನೆ ಎಂದರು.

ದಲಿತ ಹೋರಾಟಗಾರರಾದ ಮಾರಸಂದ್ರ ಮುನಿಯಪ್ಪ, ಗೋಪಿನಾಥ್ ಅವರು ಶ್ರೀಗಳಿಗೆ ಬೆಂಬಲ ನೀಡಿ, ಎಸ್ಸಿ-ಎಸ್ಟಿ ಹೋರಾಟಗಳಿಗೆ ಸರ್ಕಾರ ಸ್ಪಂದಿಸುತ್ತಿಲ್ಲ ಎಂದರು.

ಸಮಾಜದ ಮುಖಂಡರಾದ ಹರ್ತಿಕೋಟೆ ವೀರೇಂದ್ರಸಿಂಹ, ಸಿರಿಗೆರೆ ತಿಪ್ಪೇಶ್, ಬಸವರಾಜ ನಾಯಕ, ಭರತ್ ಮುಗದೂರು, ಸಣ್ಣ ನಾಯಕ, ಜಯಶ್ರೀ ಗುಡ್ಡೇಕಾಯಿ, ಕೆ.ಸಿ. ನಾಗರಾಜ್, ಶುಭಾ ವೇಣುಗೋಪಾಲ್, ಚಿತ್ರದುರ್ಗದ ಶ್ರೀನಿವಾಸ್ ನಾಯಕ ಸೇರಿದಂತೆ ಇನ್ನೂ ಅನೇಕರು ಶ್ರೀಗಳ ಧರಣಿಯಲ್ಲಿ ಭಾಗವಹಿಸಿದ್ದರು.

# ಗ್ರಾಮಾಂತರ ಪ್ರದೇಶದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಹನುಮನಹಳ್ಳಿ, ಕೊಗ್ಗನೂರು, ಹನುಮನಹಳ್ಳಿ, ಆನಗೋಡು, ಹೆಬ್ಬಾಳು, ನೀರ್ಥಡಿ, ಶಿವಪುರ, ಹಾಲುವರ್ತಿ, ಗಂಗನಕಟ್ಟೆ, ನೇರ್ಲಿಗಿ, ಚಿನ್ನಸಮುದ್ರ ಹಾಗೂ ಸುತ್ತಮುತ್ತಲಿನ ಗ್ರಾಮಗಳು ಮತ್ತು ಅತ್ತಿಗೆರೆ, ಕುರ್ಕಿ, ಬಾಡ, ಕಬ್ಬೂರು, ಹಿರೇತೊಗಲೇರಿ, ಗೋಪಾನಾಳು ಕಂದಗಲ್, ರಾಮಗೊಂಡನಹಳ್ಳಿ, ಕಾಶೀಪುರ, ದಿಂಡದಹಳ್ಳಿ, ನರಗನಹಳ್ಳಿ, ಮಾಯಕೊಂಡ, ಬೊಮ್ಮೇನಹಳ್ಳಿ, ಬಾವಿಹಾಳು, ಬುಳ್ಳಾಪುರ, ಕೊಡಗನೂರು, ನಲ್ಕುಂದ, ಬಸಾಪುರ, ಅಣಬೇರು ಹಾಗೂ ಸುತ್ತಮುತ್ತಲಿನ ಗ್ರಾಮಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 5 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

ಆವರಗೆರೆ, ಬಾಡ ಕ್ರಾಸ್, ಬಸಾಪುರ, ಹಳೇ ಚಿಕ್ಕನಹಳ್ಳಿ, ಹೊಸಚಿಕ್ಕನಹಳ್ಳಿ, ಐಗೂರು, ವಡ್ಡಿನಹಳ್ಳಿ, ಹೊನ್ನೂರು, ಎಚ್.ಕಲ್ಪನಹಳ್ಳಿ, ಮಲ್ಲಶೆಟ್ಟಿಹಳ್ಳಿ, ಕರೀಲಕ್ಕೇನಹಳ್ಳಿ ಮತ್ತು ಚಟ್ಟೋಬನಹಳ್ಳಿ, ಬೇತೂರು, ಕಾಡಜ್ಜಿ, ರಾಂಪುರ.

ಯರಗುಂಟೆ, ಕರೂರು, ಅಶೋಕನಗರ ಕೊಂಡಜ್ಜಿ ರೋಡ್, ದೊಡ್ಡಬೂದಿಹಾಳ್, ಚಿಕ್ಕಬೂದಿಹಾಳ್, ದೇವರಹಟ್ಟಿ, ಚಿತ್ತಾನಹಳ್ಳಿ, ಬಿ. ಕಲ್ಪನಹಳ್ಳಿ, ಅಮೃತನಗರ, ಆವರಗೊಳ್ಳ, ಕಕ್ಕರಗೊಳ್ಳ ಮತ್ತು ಕೋಡಿಹಳ್ಳಿ. ಕಾಡಜ್ಜಿ, ನಾಗರಕಟ್ಟೆ, ರಾಂಪುರ, ಬಸವನಾಳ್, ಬಸವನಾಳ್ ಗೊಲ್ಲರಹಟ್ಟಿ, ಬೇತೂರು, ಪುಟಗನಾಳ್ ಮತ್ತು ರೆಡ್ಡಿ ಕ್ಯಾಂಪ್ ಗ್ರಾಮಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 5 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

# 30ನೇ ವಾರ್ಡಿನಲ್ಲಿ ಕಾಮಗಾರಿಗೆ ಗುದ್ದಲಿ ಪೂಜೆ



ದಾವಣಗೆರೆ, ಫೆ.10- ನಗರ ಪಾಲಿಕೆ 30ನೇ ವಾರ್ಡಿನ ಹೊಸ ಚಿಕ್ಕನಹಳ್ಳಿಯಲ್ಲಿ 19 ಲಕ್ಷ ರೂ.ನ ಒಳಚರಂಡಿ ಕಾಮಗಾರಿಗೆ ಗುದ್ದಲಿ ಪೂಜೆಯನ್ನು ಮಹಾಪೌರ ಎಸ್.ಟಿ.ವೀರೇಶ್ ನೆರವೇರಿಸಿದರು. ಈ ಸಂದರ್ಭದಲ್ಲಿ ಸ್ಥಾಯಿ ಸಮಿತಿ ಅಧ್ಯಕ್ಷರಾದ ಉಮಾ ಪ್ರಕಾಶ್ ಹಾಗೂ 30ನೇ ವಾರ್ಡಿನ ನಗರ ಪಾಲಿಕೆ ಸದಸ್ಯರಾದ ಜಯಮ್ಮ ಗೋಪಿ ನಾಯಕ್, ಬಿಜೆಪಿ ಮುಖಂಡರಾದ ಗೋಪಿ ನಾಯಕ್, ವಾರ್ಡ್ ಅಧ್ಯಕ್ಷರಾದ ಮಂಜುನಾಥ್, ಶೇಖಣ್ಣ ಹಾಗೂ ಇತರರು ಇದ್ದರು.

# ನಗರದಲ್ಲಿ ನಾಳೆ ಆಯುರ್ವೇದ ಶಿಬಿರ

ದಾವಣಗೆರೆ, ಫೆ.10- ಅಖಿಲ ಭಾರತ ವೀರಶೈವ ಮಹಾಸಭಾ, ದಾವಣಗೆರೆ ಜಿಲ್ಲಾ ಯುವ ಘಟಕ ಹಾಗೂ ಲೋಟಸ್ ಆಯುರ್ವೇದ ಆಸ್ಪತ್ರೆ ಇವರುಗಳ ಸಹಯೋಗದೊಂದಿಗೆ ಉಚಿತ ಆಯುರ್ವೇದ ಆರೋಗ್ಯ ತಪಾಸಣೆ ಮತ್ತು ಚಿಕಿತ್ಸಾ ಶಿಬಿರವನ್ನು ನಾಡಿದ್ದು ದಿನಾಂಕ 12 ರ ಶನಿವಾರ ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ ಪಿ.ಬಿ. ರಸ್ತೆಯಲ್ಲಿರುವ ಶ್ರೀ ಜಗದ್ಗುರು ಪಂಚಾ ಚಾರ್ಯ ಮಂದಿರ (ಶ್ರೀಶೈಲ ಮಠ)ದಲ್ಲಿ ಹಮ್ಮಿಕೊಳ್ಳಲಾಗಿದೆ.

ಶಿಬಿರವನ್ನು ತಜ್ಞರಾದ ಡಾ. ಟಿ. ಸಂತೋಷ್, ಡಾ. ನಟರಾಜ್ ಅರಳಗಪ್ಪಿ, ಡಾ. ಶ್ವೇತಾ ಶಿದ್ದಿಬಾವಿ ಅವರು ನಡೆಸಿಕೊಡುವರು. ವಿವರಗಳಿಗೆ ಸಂಪರ್ಕಿಸಿ: 84319 32293, 96865 51162, 96200 96003, 96322 84707ಗೆ.

# ರಾಹುಲ್ ಜಾರಕಿಹೊಳಿ ಅವರಿಗೆ ಸನ್ಮಾನ




ದಾವಣಗೆರೆ, ಫೆ.10 - ಕೆಪಿಸಿಸಿ ಕಾರ್ಯಾಧ್ಯಕ್ಷರೂ ಆದ ಶಾಸಕ ಸತೀಶ್ ಜಾರಕಿಹೊಳಿ ಅವರ ಪುತ್ರ - ರಾಜ್ಯ ವಾಲ್ಮೀಕಿ ನಾಯಕ ಸಮಾಜದ ಯುವ ಮುಖಂಡ ರಾಹುಲ್ ಸತೀಶ್ ಜಾರಕಿಹೊಳಿ ಅವರು ಇಂದಿಲ್ಲಿ ನಾಯಕ ವಿದ್ಯಾರ್ಥಿ ನಿಲಯಕ್ಕೆ ಭೇಟಿ ನೀಡಿದ್ದ ಸಂದರ್ಭದಲ್ಲಿ ಅವರನ್ನು ಸನ್ಮಾನಿಸಲಾಯಿತು.

ನಗರಸಭೆಯ ಮಾಜಿ ಅಧ್ಯಕ್ಷರೂ, ಜಿಲ್ಲಾ ವಾಲ್ಮೀಕಿ ನಾಯಕ ಸಮಾಜದ ಅಧ್ಯಕ್ಷರೂ ಆದ ಬಿ. ವೀರಣ್ಣ, ನಿಲಯದ ನಿರ್ದೇಶಕರುಗಳಾದ ಎನ್.ಎಂ ಆಂಜನೇಯ ಗುರೂಜಿ, ಗುಮ್ಮನೂರು ಶಂಬಣ್ಣ, ಶ್ರೀನಿವಾಸ ದಾಸಕರಿಯಪ್ಪ, ಶಾಮನೂರು ಡಿ.ಬಿ. ಪ್ರವೀಣ್, ಶ್ಯಾಗಲೆ ಕೆ.ಆರ್. ಮಂಜುನಾಥ್, ವಿಧಾನ ಪರಿಷತ್ ಮಾಜಿ ಸದಸ್ಯ ಅಬ್ದುಲ್ ಜಬ್ಬಾರ್, ಕಾಂಗ್ರೆಸ್ ಮುಖಂಡರಾದ ಟಿ. ಸುಭಾಶ್‌ಚಂದ್ರ, ನಗರ ಪಾಲಿಕೆ ಸದಸ್ಯ ವಿನಾಯಕ ಪೈಲ್ವಾನ್, ಹೊಸಕೆರೆ ಸತೀಶ್, ಸಿರಾಜ್ ಶೇಕ್, ಪೈಲ್ವಾನ್ ಮಹೇಶಣ್ಣ, ರಘು ದೊಡ್ಮನೆ ದೊಡ್ಡಘಟ್ಟ, ಹೇಮಣ್ಣ ಅಣ್ಣಾಪುರ, ವಿಜಯಲಕ್ಷ್ಮಿ, ಆರ್.ಬಸಣ್ಣ ಬಿ.ವಿ. ಪ್ರಮೋದ್ ಮತ್ತು ಇತರರು ಹಾಜರಿದ್ದರು.

# ನಾಡಿದ್ದು ಅಂಬೇಡ್ಕರ್ ಕಂಚಿನ ಪ್ರತಿಮೆ ಅನಾವರಣ

## 11.5 ಅಡಿ ಎತ್ತರದ ಬಸವೇಶ್ವರ, ಕಿತ್ತೂರು ರಾಣಿ ಚೆನ್ನಮ್ಮ ಪ್ರತಿಮೆಗಳಿಗೆ ಭೂಮಿ ಪೂಜೆ

ದಾವಣಗೆರೆ, ಫೆ. 10 – ಇದೇ ದಿನಾಂಕ 13ರ ಭಾನುವಾರ ಬೆಳಿಗ್ಗೆ 11 ಗಂಟೆಗೆ ನಗರದ ಬಿ.ಆರ್. ಅಂಬೇಡ್ಕರ್ ವೃತ್ತದಲ್ಲಿ ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಅವರ ಕಂಚಿನ ಪ್ರತಿಮೆ ಅನಾವರಣಗೊಳಿಸಲಾಗುವುದು ಎಂದು ಮೇಯರ್ ಎಸ್.ಟಿ. ವೀರೇಶ್ ತಿಳಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 9.5 ಅಡಿ ಎತ್ತರದ ಪ್ರತಿಮೆಯನ್ನು 24 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಲಾಗಿದೆ. ಮೀರಜ್‌ನ ವಿಜಯ್ ಗುಜ್ಜಾರ್ ಅವರು ಪ್ರತಿಮೆ ರೂಪಿಸಿದ್ದಾರೆ. 22 ಲಕ್ಷ ರೂ. ಗಳ ವೆಚ್ಚದಲ್ಲಿ ವೃತ್ತವನ್ನು ಅಭಿವೃದ್ಧಿ ಪಡಿಸಲಾಗುತ್ತಿದೆ ಎಂದು ಹೇಳಿದರು.

ಪ್ರತಿಮೆ ಸ್ಥಾಪಿಸಲು ಅಗತ್ಯವಾದ ಪೀಠದ ನಿರ್ಮಾಣ ಈಗಾಗಲೇ ಪೂರ್ಣಗೊಂಡಿದೆ. ವೃತ್ತದ ಅಭಿವೃದ್ಧಿಯ ಉಳಿದ ಕಾಮಗಾರಿಗಳನ್ನು ನಂತರದಲ್ಲಿ ಕೈಗೊಳ್ಳಲಾಗುವುದು ಎಂದರು.

ಸಂಸದ ಜಿ.ಎಂ. ಸಿದ್ದೇಶ್ವರ, ಶಾಸಕರುಗಳಾದ ಎಸ್.ಎ. ರವೀಂದ್ರನಾಥ್, ಶಾಮನೂರು ಶಿವಶಂಕರಪ್ಪ ಅವರುಗಳ ಉಪಸ್ಥಿತಿಯಲ್ಲಿ ಉದ್ಘಾಟನಾ ಕಾರ್ಯಕ್ರಮ ನೆರವೇರಲಿದೆ.

ಇದೇ ವೇಳೆ ಪಾಲಿಕೆ ಆವರಣದಲ್ಲಿ ಜಗಜ್ಯೋತಿ ಬಸವೇಶ್ವರರ ಪ್ರತಿಮೆ ಹಾಗೂ ಕಿತ್ತೂರು ರಾಣಿ ಚನ್ನಮ್ಮ ವೃತ್ತದಲ್ಲಿ ಕಿತ್ತೂರು ರಾಣಿ ಚೆನ್ನಮ್ಮ ಕಂಚಿನ ಪ್ರತಿಮೆಗಳ ಸ್ಥಾಪನೆಗೆ ಭೂಮಿ ಪೂಜೆ ನೆರವೇರಿಸಲಾಗುವುದು. ಪ್ರತಿಮೆಗಳ ಸ್ಥಾಪನೆಗೆ ತಲಾ 50 ಲಕ್ಷ ರೂ. ವೆಚ್ಚವಾಗಲಿದೆ. ಎರಡೂ ಪ್ರತಿಮೆಗಳು ಅಶ್ವಾರೂಢ ಮಾದರಿಯಲ್ಲಿರಲಿವೆ ಹಾಗೂ 11.5 ಅಡಿ ಎತ್ತರದ್ದಾಗಿರಲಿವೆ ಎಂದವರು ವಿವರಿಸಿದರು.

ಮನೆಗಳಿಂದ ಕಸ ಸಂಗ್ರಹಿಸುವ ಗಂಟಿ ಗಾಡಿಯವರು ಹಣ ಪಡೆಯುತ್ತಿರುವ ಕುರಿತು ಕೇಳಿದ ಪ್ರಶ್ನೆಯೊಂದಕ್ಕೆ ಉತ್ತರಿಸಿದ ಅವರು, ಪ್ರಸಕ್ತ ಪಾಲಿಕೆಯಿಂದ ಅವರಿಗೆ ವೇತನ ನೀಡುತ್ತಿಲ್ಲ. ಮುಂದಿನ ದಿನಗಳಲ್ಲಿ ಪಾಲಿಕೆ ವತಿಯಿಂದಲೇ ಗಂಟಿ ಗಾಡಿಯವರಿಗೆ ವೇತನ ನೀಡಲಾಗುವುದು. ನಂತರ ಸಾರ್ವಜನಿಕರಿಂದ ಹಣ ಪಡೆಯುವುದು ನಿಲ್ಲಲಿದೆ ಎಂದರು.

ಈ ಸಂದರ್ಭದಲ್ಲಿ ಉಪ ಮೇಯರ್ ಶಿಲ್ಪಾ ಜಯಪ್ರಕಾಶ್, ಪಾಲಿಕೆ ಸದಸ್ಯರುಗಳಾದ ಪ್ರಸನ್ನ ಕುಮಾರ್, ಎಲ್.ಡಿ. ಗೋಣೆಪ್ಪ, ಗೀತಾ ದಿಳ್ಳೆಪ್ಪ, ವೀಣಾ ನಂಜಣ್ಣ, ಗೌರಮ್ಮ ವೀರೇಶ್, ರೇಣುಕ ಶ್ರೀನಿವಾಸ್, ಶಾಂತ ಕುಮಾರ್ ಸೋಗಿ ಮತ್ತಿತರರು ಉಪಸ್ಥಿತರಿದ್ದರು.

### ಪಾಲಿಕೆ ಮೇಯರ್ ಚುನಾವಣೆಯಲ್ಲಿ ಗೆಲ್ಲುತ್ತೇವೆ

**ಮುಂಬರುವ ಪಾಲಿಕೆ ಮೇಯರ್ ಚುನಾವಣೆಯಲ್ಲಿ ನಾವೇ ಗೆಲ್ಲುತ್ತೇವೆ. ಮುಂದಿನ ಮೂರು ವರ್ಷವೂ ನಾವೇ ಅಧಿಕಾರದಲ್ಲಿರುತ್ತೇವೆ ಎಂದು ಮೇಯರ್ ಎಸ್.ಟಿ. ವೀರೇಶ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಮೇಯರ್ ಸ್ಥಾನಕ್ಕೆ ಎಸ್.ಸಿ. ಮಹಿಳಾ ಮೀಸಲಾತಿ ಇದೆ. ಈ ಹುದ್ದೆಗಾಗಿ ಬಿಜೆಪಿಯಲ್ಲಿ ಉಪ ಮೇಯರ್ ಶಿಲ್ಪ ಜಯಪ್ರಕಾಶ್ ಹಾಗೂ ಜಯಮ್ಮ ಗೋಪಿನಾಥ್ ಅವರು ಅರ್ಹರಿದ್ದಾರೆ. ಇವರಲ್ಲಿ ಒಬ್ಬರು ಆಯ್ಕೆಯಾಗಲಿದ್ದಾರೆ ಎಂದವರು ಹೇಳಿದ್ದಾರೆ. ಯಾರು ಅಭ್ಯರ್ಥಿಯಾಗಲಿದ್ದಾರೆ ಎಂಬ ಪ್ರಶ್ನೆಗೆ ಉತ್ತರಿಸಲು ಅವರು ಬಯಸಲಿಲ್ಲ.**

# ಕ್ರಿಪ್ಟೋಗಳಿಗೆ ಕವಡೆ ಕಾಸಿನ ಬೆಲೆ ಇಲ್ಲ : ಆರ್.ಬಿ.ಐ.

ಮುಂಬೈ, ಫೆ. 10 – ಖಾಸಗಿ ಕ್ರಿಪ್ಟೋಕರೆನ್ಸಿಗಳು ಸಮಗ್ರ ಆರ್ಥಿಕ ವ್ಯವಸ್ಥೆ ಹಾಗೂ ಹಣಕಾಸು ಸ್ಥಿರತೆಗೆ ಅಪಾಯಕಾರಿ ಎಂದಿರುವ ರಿಸರ್ವ್ ಬ್ಯಾಂಕ್ ಶಕ್ತಿಕಾಂತ ದಾಸ್, ಕ್ರಿಪ್ಟೋಗಳ ಬೆಲೆ ಕವಡೆ ಕಾಸಿನಷ್ಟೂ ಇಲ್ಲ ಎಂದು ಹೂಡಿಕೆದಾರರಿಗೆ ಎಚ್ಚರಿಸಿದ್ದಾರೆ.

ಕ್ರಿಪ್ಟೋ ಕರೆನ್ಸಿಗಳ ಬಗ್ಗೆ ಹಣಕಾಸು ಸಂಸ್ಥೆಗಳು ಈ ಹಿಂದಿನಿಂದಲೂ ಎಚ್ಚರಿಸುತ್ತಾ ಬಂದಿವೆ. ಆದರೆ, ಕೇಂದ್ರ ಸರ್ಕಾರ ಮಂಡಿಸಿರುವ ಬಜೆಟ್‌ನಲ್ಲಿ ಕ್ರಿಪ್ಟೋ ಆಸ್ತಿಗಳ ಲಾಭದ ಮೇಲೆ ಶೇ.30ರ ತೆರಿಗೆ ಹೇರಿದ ನಂತರ ದಾಸ್ ನೀಡಿರುವ ಹೇಳಿಕೆ ಪ್ರಾಮುಖ್ಯತೆ ಪಡೆದಿದೆ. ಸರ್ಕಾರ ತೆರಿಗೆ ಹೇರಿರುವುದರಿಂದ ಕ್ರಿಪ್ಟೋಗಳ ವ್ಯಾಪಾರ ಅಧಿಕೃತವಾಗಲಿದೆ ಎಂಬ ಭಾವನೆಯೂ ಇತ್ತು.

ಖಾಸಗಿ ಕ್ರಿಪ್ಟೋ ಕರೆನ್ಸಿ ಅಥವಾ ಅವುಗಳನ್ನು ಬೇರೆ ಯಾವುದೇ ಹೆಸರಿನಿಂದ ಕರೆದರೂ, ಅವುಗಳು ರಿಸರ್ವ್ ಬ್ಯಾಂಕ್ ಹಣಕಾಸು ಸ್ಥಿರತೆ ಬಗ್ಗೆ ಕ್ರಮ ತೆಗೆದುಕೊಳ್ಳುವುದಕ್ಕೆ ಅಡ್ಡಿಪಡಿಸುತ್ತವೆ ಎಂದು ಪತ್ರಕರ್ತರೊಂದಿಗೆ ಮಾತನಾಡುತ್ತಿದ್ದ ದಾಸ್ ಹೇಳಿದ್ದಾರೆ. ಕ್ರಿಪ್ಟೋ ಹೂಡಿಕೆದಾರರಿಗೆ ಎಚ್ಚರಿಕೆ ನೀಡುವುದು ನನ್ನ ಕರ್ತವ್ಯ. ನಿಮ್ಮ ಸ್ವಂತ ಅಪಾಯವನ್ನು ಗಮನದಲ್ಲಿಟ್ಟುಕೊಂಡು ಹೂಡಿಕೆ ಮಾಡಿ. ಆದರೆ, ಮೂಲತಃ ಕ್ರಿಪ್ಟೋಗಳ ಬೆಲೆ ಕವಡೆ ಕಾಸಿನಷ್ಟೂ ಇಲ್ಲ ಎಂಬುದನ್ನು ಗಮನದಲ್ಲಿಟ್ಟುಕೊಳ್ಳಿ ಎಂದು ತಿಳಿಸಿದ್ದಾರೆ.

# ಕೊಟ್ಟೂರೇಶ್ವರ ರಥ ಎಳೆಯಲು 300 ಜನರಿಗೆ ಮಾತ್ರ ಅವಕಾಶ



ಕೊಟ್ಟೂರು, ಫೆ.10- ಇದೇ ದಿನಾಂಕ 25 ರಂದು ಶುಕ್ರವಾರ ನಡೆಯಲಿರುವ ಕೊಟ್ಟೂರು ಶ್ರೀ ಗುರು ಬಸವೇಶ್ವರ ರಥೋತ್ಸವ ಹಿನ್ನೆಲೆಯಲ್ಲಿ ರಥ ಎಳೆಯಲು ಕೇವಲ 300 ಜನರಿಗೆ ಮಾತ್ರ ಅವಕಾಶ ಕೊಡಲಾಗುವುದು. ಇದರ ಹೊರತಾಗಿ ಹೊರಗಿನ ಭಕ್ತರು ಮತ್ತು ಪಾದಯಾತ್ರಿಗಳಿಗೆ ನಿರ್ಬಂಧ ಹೇರಲಾಗುವುದು ಎಂದು ವಿಜಯನಗರ ಜಿಲ್ಲಾಧಿಕಾರಿ ಅನಿರುದ್ಧ್ ಪಿ.ಶ್ರವಣ್ ತಿಳಿಸಿದ್ದಾರೆ.

ಪಟ್ಟಣದ ಬಾಲಾಜಿ ಕನ್ವೆನ್ಷನ್ ಹಾಲ್‌ನಲ್ಲಿ ಹಿಂದೂ ಧಾರ್ಮಿಕ ದತ್ತಿ ಮುಜುರಾಯಿ ಇಲಾಖೆ ಗುರುವಾರ ಆಯೋಜಿಸಿದ್ದ ಶ್ರೀ ಗುರು ಬಸವೇಶ್ವರ ಸ್ವಾಮಿಯ ರಥೋತ್ಸವದ ಪೂರ್ವ ಸಿದ್ಧತಾ ಸಭೆಯ ನೇತೃತ್ವ ವಹಿಸಿ ಅವರು ಮಾತನಾಡಿದರು.

ಕೋವಿಡ್ ಹಿನ್ನೆಲೆಯಲ್ಲಿ ಹೆಚ್ಚಿನ ಜನರು ಪಾಲ್ಗೊಳ್ಳುವ ಎಲ್ಲಾ ಧಾರ್ಮಿಕ ಕಾರ್ಯಕ್ರಮಗಳನ್ನು ಸರ್ಕಾರ ನಿಷೇಧಿಸಿ ಆದೇಶ ಹೊರಡಿಸಿದ್ದು, ಇದರ ಅನ್ವಯ ಎಲ್ಲಾ ಜಾತ್ರಾ ಮಹೋತ್ಸವಗಳು ಜಿಲ್ಲೆಯಲ್ಲಿ ನಡೆಯದಂತೆ ನಿರ್ಬಂಧಗೊಳಿಸಲಾಗಿದೆ ಎಂದು ಹೇಳಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಕೆ.ಅರುಣ್ ಮಾತನಾಡಿ, ರಥೋತ್ಸವದಲ್ಲಿ ರಥವನ್ನು ಎಳೆಯಲು ನಿರ್ದಿಷ್ಟ ಪಡಿಸಿದ ಸಂಖ್ಯೆಗನುಗುಣವಾಗಿ ಪಾಸ್ ನೀಡಲಾಗುವುದು ಎಂದರು.

ಶಾಸಕ ಎಸ್.ಭೀಮಾನಾಯ್ಕ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಜಿ.ಪಂ. ಮಾಜಿ ಸದಸ್ಯ ಎಂ.ಎಂ.ಜೆ. ಹರ್ಷವರ್ಧನ್, ರೈತ ಸಂಘದ ರಾಜ್ಯ ಉಪಾಧ್ಯಕ್ಷ ಎನ್. ಭರಮಣ್ಣ, ತೆಗ್ಗಿನಕೇರಿ ಕೊಟ್ರೇಶ್, ವಕೀಲ ಹನುಮಂತಪ್ಪ, ಬದ್ದಿ ಮರಿಸ್ವಾಮಿ, ಕೆ. ಮಂಜುನಾಥಗೌಡ, ಬೇಲಿಗೌಡ್ರು ಸೋಮಶೇಖರಗೌಡ, ಉಜ್ಜಿನಿ ರುದ್ರಪ್ಪ, ದೇವರಮನಿ ಸುರೇಶ್, ಮರಬದ ನಾಗರಾಜ, ಕೆ. ಕೊಟ್ರೇಶ್ ಮತ್ತಿತರರು ಮಾತನಾಡಿದರು.

ಕ್ರಿಯಾಮೂರ್ತಿ ಶ್ರೀ ಶಂಕರಸ್ವಾಮೀಜಿ, ಪ.ಪಂ ಅಧ್ಯಕ್ಷೆ ಭಾರತಿ ಸುಧಾಕರ ಪಾಟೀಲ್, ಡಿ.ವೈ.ಎಸ್.ಪಿ. ಜಿ.ಹರೀಶ್, ಸಹಾಯಕ ಆಯುಕ್ತ ಜಿ.ಎಲ್. ಚಂದ್ರಶೇಖರಯ್ಯ, ತಹಶೀಲ್ದಾರ್ ಎಂ. ಕುಮಾರಸ್ವಾಮಿ ತಾಲ್ಲೂಕು ಪಂಚಾಯಿತಿ ಪ್ರಭಾರಿ ಇ.ಓ ಬೆಣ್ಣೆ ವಿಜಯಕುಮಾರ್ ವೇದಿಕೆಯಲ್ಲಿದ್ದರು.

ಸಭೆಯಲ್ಲಿ ಪ್ರಧಾನ ಧರ್ಮಕರ್ತ ಸಿ.ಎಚ್.ಎಂ. ಗಂಗಾಧರ, ಸಾವಜ್ಜಿ ರಾಜೇಂದ್ರ ಪ್ರಸಾದ್, ಪಿ. ಸುಧಾಕರ ಗೌಡ, ಪ.ಪಂ. ಸ್ಥಾಯಿ ಸಮಿತಿ ಅಧ್ಯಕ್ಷ ತೋಟದ ರಾಮಣ್ಣ, ಸದಸ್ಯರುಗಳಾದ ತೆಗ್ಗಿನಕೇರಿ ಜಗದೀಶ್, ವಿನಯ ಹೊಸಮನಿ, ಮೇಘರಾಜ್, ಮೈದೂರು ರಾಜೀವ್, ಬೂದಿ ಶಿವಕುಮಾರ್, ಐ.ಎಂ. ದಾರುಕೇಶ್, ಎ.ಪಿ.ಎಂ.ಸಿ. ಕಾರ್ಯದರ್ಶಿ ವೀರಣ್ಣ, ತಾಲ್ಲೂಕು ವೈದ್ಯಾಧಿಕಾರಿ ಷಣ್ಮುಖನಾಯ್ಕ, ಬದ್ಯಾನಾಯ್ಕ, ಚೇತನ್ ಮತ್ತಿತರೆ ಅಧಿಕಾರಿಗಳು ಪಾಲ್ಗೊಂಡಿದ್ದರು

ಧಾರ್ಮಿಕ ದತ್ತಿ ಸಹಾಯಕ ಆಯುಕ್ತ ಎಂ.ಎಚ್.ಪ್ರಕಾಶ್‌ರಾವ್ ಸ್ವಾಗತಿಸಿ ವಂದಿಸಿದರು. ಹಿ.ಮ. ಗುರುಬಸವರಾಜ್ ನಿರೂಪಿಸಿದರು.




JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte